CREATIVE
EDUCATION FOUNDATION MOODBIDRI (R)

# ಕ್ರಿಯೇಟಿವ್ ನಿನಾದ

ಯುಗಾದಿಯ ಶುಭಾಶಯಗಳು

ಡಿಸೆಂಬರ್ 2022 - ಫೆಬ್ರವರಿ 2023

ತ್ರೈಮಾಸಿಕ ಪತ್ರಿಕೆ | ಕ್ರಿಯಾಶೀಲ ಮನಸ್ಸುಗಳಿಗಾಗಿ... | ಸಂಪುಟ 1 ಸಂಚಿಕೆ 3

## ಹಿರಿಯರ ಕನ್ನಡ ಸೇವೆಯು ನಮಗೆ ಮಾದರಿಯಾಗಲಿ – ಡಾ. ಹಿರೇಮಗಳೂರು ಕಣ್ಣನ್

**(ಕ್ರಿಯೇಟಿವ್ ಮೀಡಿಯಾ : ಕಾರ್ಕಳ)**

ಕನ್ನಡದ ಕಂಪು ವಿಶ್ವದೆಲ್ಲೆಡೆ ಪಸರಿಸಲು ನಾವು ಕಟಿಬದ್ಧರಾಗಬೇಕು. ಕನ್ನಡದ ನೆಲ, ಜಲ, ಭಾಷೆಗಳು ಉತ್ತುಂಗ ಕ್ಕೇರಲು ಇಂದಿನ ಯುವ ಪೀಳಿಗೆ ಪ್ರಯತ್ನಿಸಬೇಕು. ನಮ್ಮ ಪೂರ್ವಿಕರು ನಮಗೆ ದೊರಕಿಸಿಕೊಟ್ಟಿರುವ ಈ ಭವ್ಯ ಭಾಷೆ, ಕಲೆ, ಸಂಪತ್ತನ್ನು ವೃದ್ಧಿಸಬೇಕು. ನಮ್ಮಲ್ಲಿರುವ ಪರಸ್ಪರ ದ್ವೇಷಭಾವ ಬಿಟ್ಟು ಸುಮನಸಿನವರಾಗಬೇಕಾಗಿದೆ. ತಂದೆ–ತಾಯಿಗಳನ್ನು ಪ್ರೀತಿಯಿಂದ ಸಲಹಬೇಕು. ಹಾಗೆಯೇ ನಮ್ಮ ಮಾತೃ ಭೂಮಿ, ತಾಯಿ ಭಾಷೆಯನ್ನು ಬೆಳೆಸಬೇಕು ಎಂದು ಕನ್ನಡದ ಪೂಜಾರಿ ಡಾ. ಹಿರೇಮಗಳೂರು ಕಣ್ಣನ್ ಕರೆ ನೀಡಿದರು.

ಅವರು ನವೆಂಬರ್ 29 ರಂದು ಕಾರ್ಕಳದ ಕ್ರಿಯೇಟಿವ್ ಪದವಿಪೂರ್ವ ಕಾಲೇಜಿನಲ್ಲಿ ನಡೆದ **'ಕ್ರಿಯೇಟಿವ್ ನುಡಿಹಬ್ಬ–2022'** ವನ್ನು ಉದ್ಘಾಟಿಸಿ **"ನಿನಾದ"** ತ್ರೈಮಾಸಿಕ ಪತ್ರಿಕೆಯ ಎರಡನೇ ಸಂಚಿಕೆಯನ್ನು ಬಿಡುಗಡೆಗೊಳಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಆರೋಗ್ಯ ಪೂರ್ಣವಾದ ಮನಸ್ಸು ಪಡೆಯಲು ಕ್ರಿಯಾಶೀಲ ಚಟುವಟಿಕೆಗಳು ಪೂರಕ. ಸತ್ಯದ ಒಸರನ್ನು ಹುಡುಕುವ ಕಡೆಗೆ ಸದಾ ಮನಸ್ಸು ತುಡಿಯುತ್ತಿರಲಿ ಎಂದು ಹಾರೈಸಿದರು.

ಕ್ರಿಯೇಟಿವ್ ಕಾಲೇಜಿನಲ್ಲಿ ವಾಣಿಜ್ಯ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ರಾಘವೇಂದ್ರ ಬಿ ರಾವ್(ಅನುಬೆಳ್ಳೆ) ಅವರ 'ಬೊಂಬಿನ ಬೇಲಿ' ಕೃತಿಯನ್ನು ಲೋಕಾರ್ಪಣೆ ಗೊಳಿಸಲಾಯಿತು.




ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್ ಮಾತನಾಡಿ ವಿದ್ಯಾರ್ಥಿಗಳು ಸಾಹಿತ್ಯ ಕ್ಷೇತ್ರದೆಡೆಗೆ ಮತ್ತು ಮೌಲ್ಯಯುತ ವಿಚಾರಗಳನ್ನು ತಿಳಿಯಲು ಆಸಕ್ತರಾಗಬೇಕೆಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥಾಪಕರಲ್ಲೊಬ್ಬರಾದ ಅಮೃತ್ ರೈ ಮಾತನಾಡಿ ವಿದ್ಯಾರ್ಥಿಗಳ ಸರ್ವ ತೋಮುಖ ಬೆಳವಣಿಗೆಗೆ ಪೂರಕವಾದ ಸಾಹಿತ್ಯ ಚಟುವಟಿಕೆ ಮತ್ತು ಕಾರ್ಯಕ್ರಮಗಳು ಎಲ್ಲ ಕಡೆಯಲ್ಲೂ ನಡೆಯುವಂತಾಗಲಿ ಎಂದು ಆಶಿಸಿದರು.

ಸಂಸ್ಥಾಪಕರಾದ ಡಾ. ಗಣನಾಥ ಶೆಟ್ಟಿ, ಆದರ್ಶ ಎಂ.ಕೆ, ವಿಮಲ್ ರಾಜ್, ಕ್ರಿಯೇಟಿವ್ ಪದವಿ ಪೂರ್ವ ಕಾಲೇಜು ಉಡುಪಿಯ ಪ್ರಾಂಶು ಪಾಲರಾದ ಸ್ಟ್ಯಾನಿ ಲೋಬೊ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಸ್ಥಾಪಕರಾದ ಅಶ್ವತ್ ಎಸ್.ಎಲ್. ಪ್ರಾಸ್ತಾವಿಕ ಮಾತನ್ನಾಡಿ ಸ್ವಾಗತಿಸಿದರು. ವಿನಾಯಕ ಜೋಗ್ ಬಹುಮಾನಿತರ ಯಾದಿ ವಾಚಿಸಿದರು. ಲೋಹಿತ್ ಎಸ್.ಕೆ ವಂದಿಸಿದರು. ರಾಮಕೃಷ್ಣ ಹೆಗಡೆ ಕಾರ್ಯಕ್ರಮ ನಿರೂಪಿಸಿದರು.

## "ಕ್ರಿಯೇಟಿವ್ ನುಡಿ ಹಬ್ಬ"




**(ಕ್ರಿಯೇಟಿವ್ ಮೀಡಿಯಾ : ಹಾಸನ)**

ಹೆಚ್. ಕೆ.ಎಸ್. ಪ.ಪೂ ಕಾಲೇಜಿನಲ್ಲಿ 67ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ "ಕ್ರಿಯೇಟಿವ್ ನುಡಿ ಹಬ್ಬ" ಕಾರ್ಯಕ್ರಮ ಬಹು ವಿಜೃಂಭಣೆಯಿಂದ ಜರುಗಿತು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಕನ್ನಡದ ಪೂಜಾರಿಗಳಾದ ಡಾ. ಹಿರೇಮಗಳೂರು ಕಣ್ಣನ್‌ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಹಾಸನ ಜಿಲ್ಲೆಯ ಶ್ರೇಷ್ಠ ಸಾಹಿತಿಗಳಾದ ಟಿ. ಪಿ ಕೈಲಾಸಂ, ವೀಣೆ ದೊರೆಸ್ವಾಮಿ ಅಯ್ಯಂಗಾರ್ ಮೊದಲಾದವರ ಕನ್ನಡ ಪ್ರೇಮದ ಜೀವನಗಾಥೆಯನ್ನು ವಿವರಿಸುತ್ತಾ ಆಧುನಿಕ ಜೀವನದಲ್ಲಿ ಕನ್ನಡ ಭಾಷೆಯನ್ನು ಯಾವ ಬಗೆಯಲ್ಲಿ ಬಳಸಬೇಕು ಎನ್ನುವುದನ್ನು ಲಘು ಹಾಸ್ಯದೊಂದಿಗೆ ಪ್ರಸ್ತುತ ಪಡಿಸಿದರು.

ಸಭಾಧ್ಯಕ್ಷತೆವಹಿಸಿದ್ದ ಹೆಚ್. ಕೆ. ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ – ಜಂಟಿ ಕಾರ್ಯದರ್ಶಿಗಳಾದ ಹೆಚ್. ಎಸ್ ಪ್ರಶಾಂತ್ ಗೌಡ ಮಾತನಾಡುತ್ತಾ ಭಾಷೆ, ಸಂಸ್ಕೃತಿ, ಜನ ಜೀವನ ಬಗೆಗೆ ವಿವರಿಸಿ ಕನ್ನಡ ತಾಯಿಯ ಹೃದಯ ವೈಶಾಲ್ಯತೆಯನ್ನು ಬಣ್ಣಿಸಿದರು.

ಕ್ರಿಯೇಟಿವ್ ಪಿ.ಯು ಕಾಲೇಜು ಕಾರ್ಕಳದ ಸಹಸಂಸ್ಥಾಪಕರಾದ ಅಶ್ವತ್ ಎಸ್. ಎಲ್, ಅಮೃತ್ ರೈ, ಪ್ರಾಂಶುಪಾಲ ವಿಮಲ್ ರಾಜ್ .ಜಿ, ಉಪಪ್ರಾಂಶುಪಾಲ ಆದಿತ್ಯ ವಟಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕನ್ನಡ ಉಪನ್ಯಾಸಕ ಸತೀಶ್ ಆಚಾರ್ಯ ಸ್ವಾಗತಿಸಿದರು. ಭೌತಶಾಸ್ತ್ರ ಉಪನ್ಯಾಸಕ ಲಕ್ಷಣ ಬಜಿಲ ವಂದಿಸಿದರು. ಕನ್ನಡ ಉಪನ್ಯಾಸಕ ರಮೇಶ್ .ಎಂ ಕಾರ್ಯಕ್ರಮ ನಿರೂಪಿಸಿದರು.

ಕನ್ನಡ ಉಪನ್ಯಾಸಕ ರಮೇಶ್.ಎಂ ಸ್ವಾಗತಿಸಿ, ಭೌತಶಾಸ್ತ್ರ ಉಪನ್ಯಾಸಕ ಲಕ್ಷ್ಮಣ್ ಬಜಿಲ ಧನ್ಯವಾದ ಸಮರ್ಪಣೆಗೈದರು. ಕನ್ನಡ ಉಪನ್ಯಾಸಕ ಸತೀಶ್ ಆಚಾರ್ಯ ಕಾರ್ಯಕ್ರಮ ನಿರೂಪಿಸಿದರು. ಆ ಬಳಿಕ ವಿದ್ಯಾರ್ಥಿಗಳಿಂದ ಭಾರತ ವೈಭವ ಎಂಬ ವಿಶೇಷ ನೃತ್ಯ ವೈಭವ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಉಪನ್ಯಾಸಕ ವೃಂದ ಹಾಗೂ ವಿದ್ಯಾರ್ಥಿಗಳ ತಂಡದಿಂದ ವಿಶೇಷ ಯಕ್ಷಗಾನ ಕಾರ್ಯಕ್ರಮವು ನೆರವೇರಿತು.

## 'ಆವಿರ್ಭವ್ – 2022'

### ಗ್ರಾಮೀಣ ಪ್ರದೇಶದ ವಿದ್ಯಾಸಂಸ್ಥೆಗಳು ಶೈಕ್ಷಣಿಕ ಅಭಿವೃದ್ಧಿಗೆ ಪೂರಕ - ವಿ. ಸುನೀಲ್ ಕುಮಾರ್

### ಸಾಹಿತ್ಯಕ, ಮಾನವಿಕ ಅಂಶ ಪ್ರತಿ ವಿದ್ಯಾರ್ಥಿಗಳ ಗುರಿಯಾಗಬೇಕು - ಡಾ. ನರೇಂದ್ರ ರೈ ದೇರ್ಲ

**(ಕ್ರಿಯೇಟಿವ್ ಮೀಡಿಯಾ : ಕಾರ್ಕಳ)**

ಗ್ರಾಮೀಣ ಪ್ರದೇಶದಲ್ಲಿ ಕ್ರಿಯೇಟಿವ್‌ನಂತಹ ವಿದ್ಯಾಸಂಸ್ಥೆಗಳು ಬಂದಲ್ಲಿ ಅಂತಹ ಪ್ರದೇಶ ಅಭಿವೃದ್ಧಿ ಹೊಂದುವುದರ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲೂ ಉತ್ತಮ ಬದಲಾವಣೆಯಾಗುತ್ತದೆ, ಗ್ರಾಮೀಣ ವಿದ್ಯಾರ್ಥಿಗಳ ಪ್ರತಿಭೆಗೆ ಮನ್ನಣೆ ದೊರೆತಂತೆ ಆಗುತ್ತದೆ ಎಂದು ಮಾನ್ಯ ಇಂಧನ ಮತ್ತು ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರಾದ ವಿ. ಸುನಿಲ್ ಕುಮಾರ್ ಹೇಳಿದರು. ಕಾರ್ಕಳದ ಕ್ರಿಯೇಟಿವ್ ಕಾಲೇಜಿನಲ್ಲಿ ನಡೆದ ಕ್ರಿಯೇಟಿವ್ ಆವಿರ್ಭವ್–2022ರ ವಾರ್ಷಿಕೋತ್ಸವ ದಲ್ಲಿ ಬಡ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳ ಉಚಿತ ಶಿಕ್ಷಣ ವ್ಯವಸ್ಥೆ **'ಕ್ರಿಯೇಟಿವ್ ಹೊಂಗಿರಣ'** ಯೋಜನೆಯನ್ನು ಉದ್ಘಾಟಿಸಿ ಮಾತನಾಡಿದರು. ಮುಖ್ಯ ಅತಿಥಿಯಾಗಿ ಡಾ. ನರೇಂದ್ರ ರೈ ದೇರ್ಲ ಆಗಮಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನ್ನಾಡುತ್ತಾ ಸಾಹಿತ್ಯದ ಮಾನವಿಕ ಅಂಶ ಪ್ರತಿ ವಿದ್ಯಾರ್ಥಿಯ ಗುರಿಯಾಗಬೇಕು. ಸಹಜ ಬದುಕು ಬದುಕಲು ಮಾನವನ ದುರಾಸೆ ಬಿಡುತ್ತಿಲ್ಲ ಮಾನವೀಯ ಮೌಲ್ಯಗಳೊಂದಿಗೆ ಜೀವಿಸಿ ಎಂದು ಕರೆ ನೀಡಿದರು. ವಿದ್ಯಾರ್ಥಿ ಜೀವನದಲ್ಲಿ ಕಲೆ ಸಾಹಿತ್ಯದೊಂದಿಗೆ ಒಡನಾಟ ಬೆಳೆಸಿಕೊಂಡು ಪರಿಸರ ಪ್ರೀತಿಯೊಂದಿಗೆ ಬದುಕಲು ಕಲಿಯೋಣ ಎಂದು ಆಶಿಸಿದರು.




ಇನ್ನೋರ್ವ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದ ಹಿರ್ಗಾನ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ. ಸಂತೋಷ್ ಶೆಟ್ಟಿಯವರು ಪರಸ್ಪರ ಸಹಕಾರದ ಮೂಲಕ ಉತ್ತಮ ವಿದ್ಯಾಸಂಸ್ಥೆಯನ್ನು ಕಟ್ಟೋಣ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಕಳೆದ ವರ್ಷ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ವತಿಯಿಂದ ಗೌರವಿಸಲಾಯಿತು ಹಾಗೂ 2022ನೇ ಇಸವಿಯಲ್ಲಿ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕಾಲೇಜಿನಲ್ಲಿ 16 ವೈದ್ಯಕೀಯ ಮತ್ತು ಇಂಜಿನಿಯರಿಂಗ್‌ಗೆ ಪ್ರವೇಶ ಪಡೆದ 17 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಶಟ್ಲ್ ಬ್ಯಾಡ್ಮಿಂಟನ್‌ನಲ್ಲಿ ಜಿಲ್ಲಾ ಮಟ್ಟದಿಂದ ರಾಜ್ಯ ತಂಡಕ್ಕೆ ಆಯ್ಕೆಯಾದ ಕ್ರೀಡಾ ಪ್ರತಿಭೆ ಕು. ಲೇಖನಾ, ರಸ ಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ನಿಹಾರ್ ಭಟ್ ಮತ್ತು ಸುಮಂತ್ ಶೆಟ್ಟಿ, ಹಾಸನದಲ್ಲಿ ನಡೆದ ಮೈಸೂರು ವಿಭಾಗ ಮಟ್ಟದ ಪ್ರತಿಭಾ ಕಾರಂಜಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿ ಅಜಯ್ ಇವರನ್ನು ಸಂಸ್ಥೆಯ ವತಿಯಿಂದ ಗೌರವಿ ಸಲಾಯಿತು.

ಬೆಳಿಗ್ಗೆ ಕುಂದಾಪುರದ ಅಂತರಾಷ್ಟ್ರೀಯ ಖ್ಯಾತಿಯ "ಮೂರು ಮುತ್ತು" ಕಲಾವಿದ ರಿಂದ ಹಾಸ್ಯಮಯ ನಗೆನಾಟಕ ನಡೆಯಿತು. ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್ ಸಂಸ್ಥೆಯ ವಾರ್ಷಿಕ ವರದಿ ವಾಚಿಸಿದರು. ಸಂಸ್ಥಾಪಕರಲ್ಲೊಬ್ಬ ರಾದ ಅಶ್ವತ್ .ಎಸ್.ಎಲ್ ಪ್ರಾಸ್ತಾವಿಕ ನುಡಿಗಳೊಂದಿಗೆ ಸ್ವಾಗತಿಸಿದರು. ಗಣಪತಿ ಭಟ್ ಕೆ.ಎ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಸಂಸ್ಥಾಪಕರಾದ ಡಾ. ಗಣನಾಥಶೆಟ್ಟಿ, ಆದರ್ಶ ಎಂ.ಕೆ, ವಿಮಲ್ ರಾಜ್ .ಜಿ , ಅಮೃತ್ ರೈ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಉಪನ್ಯಾಸಕ ಲೋಹಿತ್ ಎಸ್.ಕೆ ವಿದ್ಯಾರ್ಥಿಗಳ ಅಭಿನಂದನಾ ಕಾರ್ಯಕ್ರಮ ನಿರ್ವಹಿಸಿದರು. ರಾಮಕೃಷ್ಣ ಹೆಗಡೆ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಕನ್ನಡ ಉಪನ್ಯಾಸಕ ಸತೀಶ್ ಆಚಾರ್ಯ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಸಭಾ ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳಿಂದ 'ಕಲಾಸಿಂಧು' ವೇದಿಕೆಯಲ್ಲಿ 'ಭಾರತ ವೈಭವ' ಪರಿಕಲ್ಪನೆಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಕಾವ್ಯೋಕ್ತಿ | ನಡೆ ಮುಂದೆ ನಡೆ ಮುಂದೆ । ನುಗ್ಗಿ ನಡೆ ಮುಂದೆ । ಜಗ್ಗದೆಯೆ ಕುಗ್ಗದೆಯೆ । ಹಿಗ್ಗಿ ನಡೆ ಮುಂದೆ – ಕುವೆಂಪು



ಒಂದು ಉತ್ತಮ ಪುಸ್ತಕ ನೂರು ಸ್ನೇಹಿತನಿಗೆ ಸಮಾನ,
ಆದರೆ ಒಬ್ಬ ಉತ್ತಮ ಸ್ನೇಹಿತ ಒಂದು ಗ್ರಂಥಾಲಯಕ್ಕೆ ಸಮಾನ.



**ಕ್ರಿಯೇಟಿವ್ ನಿನಾದ**

ಪ್ರಕಟಣೆ
ಕ್ರಿಯೇಟಿವ್ ಎಜುಕೇಶನ್ ಫೌಂಡೇಶನ್ ಮೂಡುಬಿದಿರೆ(ರಿ.)
ಕಾರ್ಕಳ, ಹಾಸನ, ಉಡುಪಿ

ಪ್ರತಿಗಳಿಗಾಗಿ : +919019844492
ಇ-ಮೇಲ್: ninada@creativeedu.in

ಕ್ರಿಯೇಟಿವ್ ನಿನಾದ ಬಳಗ

**ಗೌರವ ಸಂಪಾದಕರು**
ವಿದ್ವಾನ್ ಗಣಪತಿ ಭಟ್
ಡಾ. ಗಣನಾಥ ಶೆಟ್ಟಿ
ಅಮೃತ್ ರೈ
ಆದರ್ಶ ಎಂ.ಕೆ
ವಿಮಲ್ ರಾಜ್ ಜಿ.
ಗಣಪತಿ ಕೆ.ಎಸ್

**ಪ್ರಧಾನ ಸಂಪಾದಕರು**
ಅಶ್ವತ್ ಎಸ್.ಎಲ್.

**ಸಂಪಾದಕರು**
ರಾಘವೇಂದ್ರ ಬಿ.ರಾವ್ (ಅನು ಬೆಳ್ಳೆ)
ರಾಜೇಶ್ ಶೆಟ್ಟಿ

**ಸಲಹಾ ಮಂಡಳಿ**
ಕಾರ್ಕಳ ● ರಾಮಕೃಷ್ಣ ಹೆಗಡೆ, ಶಿವಕುಮಾರ್, ವಿನಾಯಕ ಜೋಗ್, ಮಹೇಶ್ ಶೆಣೈ, ಉಮೇಶ್ ಕೆ., ಅಶನ್ ಗೌಡ, ಪ್ರೇರಣಾ ನರೇಶ್ ಬಿ.ಆರ್
ಹಾಸನ ● ಮಹೇಶ್, ಸತೀಶ್ ಆಚಾರ್ಯ, ರಮೇಶ್, ವಿಘ್ನೇಶ್ ಕಾಮತ್
ಉಡುಪಿ ● ಸ್ಟ್ಯಾನಿ ಲೋಬೋ, ಸಂತೋಷ್

ಸಂಪಾದಕೀಯ...

## ಹೊಸತನವೇ ಮನುಜತೆಯ ಮೈಸಿರಿಯ ಲಾಸ್ಯ...

ನಿರಂತರ ಪಾಠ ಪ್ರವಚನಗಳಲ್ಲೇ ಮಿಂದೇಳುವ ಮನಸ್ಸುಗಳಿಗೆ, ನಾಲ್ಕು ಗೋಡೆಯ ತರಗತಿಗಳಿಂದಾಚೆಗಿನ ಜ್ಞಾನವನ್ನು ಉಣಬಡಿಸುವ ಕ್ರೀಯಾಶೀಲ ಕೆಲಸ ಸಾಗುತ್ತಲಿದೆ. ಪಠ್ಯದಷ್ಟೇ ಪ್ರಾಮುಖ್ಯ ನೈತಿಕ ಶಿಕ್ಷಣ. ಈ ಮೌಲ್ಯಯುತ ಜ್ಞಾನಾರ್ಜನೆಯನ್ನು ವಿದ್ಯಾರ್ಥಿಗಳಲ್ಲಿ ತುಂಬಿಸುವ ಕಾರ್ಯವು ಶಿಕ್ಷಣ ಸಂಸ್ಥೆಗಳ ಜವಬ್ದಾರಿ. ಈ ದಿಕ್ಕಿನಲ್ಲಿ ಕ್ರಿಯೇಟಿವ್ ಸಂಸ್ಥೆಯಲ್ಲಿ ಆಗುವ ಪ್ರತೀ ಕಾರ್ಯಕ್ರಮ ಹೊಸ ಹೊಸ ಆಲೋಚನೆಗಳನ್ನು ಮಕ್ಕಳ ಮನಸ್ಸುಗಳಲ್ಲಿ ಟಿಸಿಲೊಡೆಯುವಂತೆ ಮಾಡುತ್ತದೆ.

**'ಕ್ರಿಯೇಟಿವ್ ಆವಿರ್ಭವ್'** ಕಾರ್ಯಕ್ರಮ **'ಭಾರತ ವೈಭವ'** ಎಂಬ ಪರಿಕಲ್ಪನೆಯ ಮೂಲಕ ಕೇವಲ ಸಿನಿಮಾದ ನೃತ್ಯಗಳಿಂದ ಮಾತ್ರ ಕಲೆಯ ರಸಸ್ವಾದ ಎಂಬುದನ್ನು ಮರೆಮಾಚಿ, ನಮ್ಮ ದೇಶದ ವಿವಿಧ ಭಾಗದ ಎಲ್ಲಾ ಶ್ರೀಮಂತ ಕಲೆಯನ್ನು ಅತ್ಯಂತ ಸುಂದರವಾಗಿ ಪ್ರಚುರ ಪಡಿಸಿತು. ನಾಡಿನ ಸಾಂಪ್ರದಾಯಿಕ ಜಾನಪದ ಸತ್ವಗಳನ್ನು ಹುಡುಕಿ ಹೊರಟ ಕ್ರಿಯೇಟಿವ್ ಮೀಡಿಯಾ ಮಲೆನಾಡಿನ ವಿಶಿಷ್ಟ ಕಲೆ "**ಅಂಟಿಗೆ ಪಂಟಿಗೆ**"ಯನ್ನು ಪುಸ್ತಕ ರೂಪದಲ್ಲಿ ದಾಖಲಿಸುವ, ಹಾಗೇ ಯೂಟ್ಯೂಬ್‌ನಲ್ಲಿ ಪ್ರಸಾರಗೊಳಿಸುವ ಮೂಲಕ ನಶಿಸುತ್ತಿರುವ ದೇಶಿಯ ಸೊಗಡನ್ನು ಜಗತ್ತಿಗೆ ತಿಳಿಸುವ ಪ್ರಯತ್ನ ಮಾಡಿದೆ. **ನಿನಾದ** ಎಂದಿನಂತೆ ಹೊಸ ಪ್ರತಿಭೆಗಳಿಗೆ ವೇದಿಕೆಯಾಗಿ ವಿಚಾರಶೀಲ ಮನಸ್ಸುಗಳನ್ನು ಮುಟ್ಟಿ, ಕ್ರೀಯಾಶೀಲ ಚಿಂತನೆಯ ಕದವ ತಟ್ಟಿ, ಓದುಗರ ಜ್ಞಾನ ಭಂಡಾರಕ್ಕೆ ಹೊಸ ದಿಕ್ಕಿನ ಸಿರಿಧಾನ್ಯವ ನೀಡುತ್ತಿದೆ.

ಗೋಪಾಲ ಕೃಷ್ಣ ಅಡಿಗರ,

**ಹೊಸತನವೇ ಜೀವನದ ಪ್ರಗತಿಯ ರಹಸ್ಯ**
**ಹೊಸತನವೇ ಮನುಜತೆಯ ಮೈಸಿರಿಯ ಲಾಸ್ಯ** –ಸಾಲಿನಂತೆ,

ಯುಗಾದಿಯ ಈ ಸಂಭ್ರಮದಲ್ಲಿ ಬಿಡುಗಡೆಯಾಗುತ್ತಿರುವ ಈ ಸಂಚಿಕೆ ಕೂಡ ನಮ್ಮೆಲ್ಲರಲ್ಲೂ ಇನ್ನೊಂದಿಷ್ಟು ಹೊಸ ಚೈತನ್ಯವನ್ನು, ಹೊಸ ಹುರುಪನ್ನು, ಹೊಸ ಭಾವವನ್ನು, ಹೊಸ ಭರವಸೆಯನ್ನು ನೀಡಲಿ ಎಂದೆನಿಸುತ್ತಾ...



**ಅಶ್ವತ್ ಎಸ್.ಎಲ್.**
**ಪ್ರಧಾನ ಸಂಪಾದಕರು,**
ಕ್ರಿಯೇಟಿವ್ ನಿನಾದ, ಕಾರ್ಕಳ

## ಕಾಲೇಜು ವಾರ್ಷಿಕೋತ್ಸವ - 'ಆವಿರ್ಭವ್'




(ಕ್ರಿಯೇಟಿವ್ ಮೀಡಿಯಾ : ಹಾಸನ)

ಹೆಚ್.ಕೆ.ಎಸ್. ಪ.ಪೂ ಕಾಲೇಜಿನಲ್ಲಿ ವಾರ್ಷಿಕೋತ್ಸವ ಕಾರ್ಯಕ್ರಮವು ವರ್ಣರಂಜಿತವಾಗಿ ನೆರವೇರಿತು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ ಖ್ಯಾತ ಸಾಹಿತಿಗಳು, ಪ್ರೊ. ಎಂ. ಕೃಷ್ಣೇಗೌಡ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಇಂದಿನ ಶಿಕ್ಷಣ ವ್ಯವಸ್ಥೆ ಹೇಗೆ ನಮ್ಮ ಮನಸ್ಥಿತಿಯನ್ನು ಸಂಪೂರ್ಣವಾಗಿ ಪಾಶ್ಚಿಮಾತ್ಯ ವ್ಯವಸ್ಥೆಗೆ ಮಾರಿಕೊಳ್ಳುತ್ತಿದೆ ಎಂದು ವಿವರಿಸುವುದರ ಜೊತೆಗೆ, ಹಿಂದಿನ ತಲೆಮಾರಿನ ಅವಿದ್ಯಾವಂತ ಶ್ರೇಷ್ಠ ವ್ಯಕ್ತಿಗಳನ್ನು ಉಲ್ಲೇಖಿಸುತ್ತ, ವ್ಯಕ್ತಿತ್ವಗಳನ್ನು ಅಳೆಯುವ ಮಾಪನ ಯಾವುದು ಎಂಬ ಜಿಜ್ಞಾಸೆಯನ್ನು ವ್ಯಕ್ತಪಡಿಸಿದರು.

ಸಭಾಧ್ಯಕ್ಷತೆವಹಿಸಿದ್ದ ಹೆಚ್. ಕೆ. ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ – ಜಂಟಿ ಕಾರ್ಯದರ್ಶಿ ಹೆಚ್.ಎಸ್ ಪ್ರಶಾಂತ್ ಗೌಡ ಮಾತನಾಡುತ್ತಾ ವಿದ್ಯೆಗೆ ವಿನಯವೇ ಭೂಷಣ ವಾಗಿರಬೇಕು ಎಂದು ಸಲಹೆಯನ್ನಿತ್ತರು. ಪ್ರಾಸ್ತಾವಿಕವಾಗಿ ಮಾತನಾಡಿದ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ ಕಾರ್ಕಳದ ಸಹಸಂಸ್ಥಾಪಕ ಅಶ್ವತ್ ಎಸ್. ಎಲ್ ರವರು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳ ಪಾತ್ರವನ್ನು ವಿವರಿಸುತ್ತ, ನಮ್ಮ ವಿದ್ಯಾಸಂಸ್ಥೆಯಲ್ಲಿ ಇಂತಹ ಚಟುವ ಟಿಕೆಗಳಿಗೆ ಪೂರಕ ಅವಕಾಶಗಳನ್ನು ಕಲ್ಪಿಸಿ ಕೊಡುತ್ತಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರಾಂಶುಪಾಲ ವಿಮಲ್ ರಾಜ್‌ರವರು ಕಾಲೇಜಿನ ಕಾರ್ಯ ಚಟುವಟಿಕೆಗಳನ್ನು ವಿವರಿಸುತ್ತ ವಾರ್ಷಿಕ ವರದಿಯನ್ನು ವಾಚಿಸಿದರು.

ಹೆಚ್. ಕೆ. ಎಸ್ ಅಂತಾರಾಷ್ಟ್ರೀಯ ಶಾಲೆ, ಹಾಸನದ ಪ್ರಾಂಶುಪಾಲ ಶ್ರೀ ಚಂದ್ರಕಾಂತ ವರ್ಮ ಮಾತನಾಡುತ್ತಾ ಪ್ರಸ್ತುತ ಸಮಾಜದಲ್ಲಿ ವಿದ್ಯೆಗಿರುವ ವಿಶೇಷ ಮಹತ್ವವನ್ನು ಸಾರಿದರು.

ಕಳೆದ ಶೈಕ್ಷಣಿಕ ಸಾಲಿನ ಅಂತಿಮ ಪರೀಕ್ಷೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ತೋರಿದ ವಿದ್ಯಾರ್ಥಿಗಳಿಗೆ ಹಾಗೂ ಈ ವರ್ಷದಲ್ಲಿ ರಾಜ್ಯ ಮಟ್ಟದಲ್ಲಿ ವಿಜಯಿಯಾದ ಕುಸ್ತಿಪಟು ಲಿಖಿತ್ ಬಿ.ವೈಗೆ ಅತಿಥಿಗಳಿಂದ ವಿಶೇಷ ಸನ್ಮಾನ ನಡೆಸಲಾಯಿತು.

ಸಮಾರಂಭದಲ್ಲಿ ಕೋಮಲ ಎನ್.ಸುರೇಶ್ – ಅಧ್ಯಕ್ಷರು ಹೆಚ್. ಕೆ. ಎಸ್ ಸಮೂಹ ಶಿಕ್ಷಣ ಸಂಸ್ಥೆಗಳು, ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ ಕಾರ್ಕಳದ ಸಹಸಂಸ್ಥಾಪಕರುಗಳಾದ ಆದರ್ಶ್ ಎಂ.ಕೆ, ಅಮೃತ್. ರೈ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಕನ್ನಡ ಉಪನ್ಯಾಸಕ ರಮೇಶ್.ಎಂ ಸ್ವಾಗತಿಸಿ, ಭೌತಶಾಸ್ತ್ರ ಉಪನ್ಯಾಸಕ ಲಕ್ಷ್ಮಣ್ ಬಜಿಲ ಧನ್ಯವಾದ ಸಮರ್ಪಣೆಗೈದರು. ಕನ್ನಡ ಉಪನ್ಯಾಸಕ ಸತೀಶ್ ಆಚಾರ್ಯ ಕಾರ್ಯಕ್ರಮ ನಿರೂಪಿಸಿದರು. ಆ ಬಳಿಕ ವಿದ್ಯಾರ್ಥಿಗಳಿಂದ ಭಾರತ ವೈಭವ ಎಂಬ ವಿಶೇಷ ನೃತ್ಯ ವೈಭವ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಉಪನ್ಯಾಸಕ ವೃಂದ ಹಾಗೂ ವಿದ್ಯಾರ್ಥಿಗಳ ತಂಡದಿಂದ ವಿಶೇಷ ಯಕ್ಷಗಾನ ಕಾರ್ಯಕ್ರಮವು ನೆರವೇರಿತು.



**ಸಂಸ್ಥಾಪಕರು**

ಸ ರಿ ಗ ಮ ಪ ದ ನಿ **ಕ್ರಿಯೇಟಿವ್ ಶಿಕ್ಷಣ ಸಂಸ್ಥೆಗಳು ಕಾರ್ಕಳ, ಉಡುಪಿ ಜಿಲ್ಲೆ**

## ಹೆಚ್.ಕೆ.ಎಸ್.ನಲ್ಲಿ ಪೋಷಕರ ಸಭೆ

ಹಾಸನ: ನಗರದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾದ ಕ್ರಿಯೇಟಿವ್ ಪ.ಪೂ ಕಾಲೇಜು, ಕಾರ್ಕಳದ ಶೈಕ್ಷಣಿಕ ಸಹಭಾಗಿತ್ವದ ಹೆಚ್. ಕೆ.ಎಸ್ ಪಿಯು ಕಾಲೇಜು ಹಾಸನ ಇಲ್ಲಿ ನವೆಂಬರ್ 19 ಹಾಗೂ 20 ರಂದು ಪೋಷಕರ ಸಭೆ ನಡೆಯಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಕ್ರಿಯೇಟಿವ್ ಪ.ಪೂ ಕಾಲೇಜು, ಕಾರ್ಕಳದ ಸಹಸಂಸ್ಥಾಪಕರು, ಅನುಭವಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತುದಾರ ಡಾ. ಗಣನಾಥ್ ಶೆಟ್ಟಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಪ್ರಸ್ತುತ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವಲ್ಲಿ ವಿದ್ಯಾರ್ಥಿಗಳ ಪೂರ್ವ ತಯಾರಿಯ ಬಗೆಗೆ ಸಮಗ್ರ ಮಾಹಿತಿ ಒದಗಿಸಿದರು. ಸಭಾಧ್ಯಕ್ಷತೆ ವಹಿಸಿದ ಪ್ರಾಚಾರ್ಯ ವಿಮಲ್‌ರಾಜ್.ಜಿ ಯವರು ಮಾತನಾಡುತ್ತಾ ವಿದ್ಯಾರ್ಥಿಗಳ ಯಶಸ್ಸಿನಲ್ಲಿ ಪೋಷಕರ ಹಾಗೂ ಶಿಕ್ಷಕರ ಪಾತ್ರವನ್ನು ವಿವರಿಸಿದರು. ಉಪಪ್ರಾಂಶುಪಾಲ ಆದಿತ್ಯ ವಟಿಯವರು ಧನ್ಯವಾದ ಸಮರ್ಪಣೆಗೈದರು.

ಬಳಿಕ ಪೋಷಕರು ಉಪನ್ಯಾಸಕರೊಂದಿಗೆ ಮುಕ್ತವಾಗಿ ಬೆರೆತು ಮಕ್ಕಳ ಶೈಕ್ಷಣಿಕ ಪ್ರಗತಿ ಬಗೆಗೆ ಸಮಗ್ರ ಮಾಹಿತಿ ಪಡೆದುಕೊಂಡರು

## 'ಸ್ವಚ್ಛ ಭಾರತ' ಕಾರ್ಯಕ್ರಮ

ಕಾರ್ಕಳ : ದಿನಾಂಕ : 21–12–2022ನೇ ಬುಧವಾರ ದಂದು ಕ್ರಿಯೇಟಿವ್ ಪ.ಪೂ ಕಾಲೇಜಿನಲ್ಲಿ 'ಸ್ವಚ್ಛ ಭಾರತ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಹಿರ್ಗಾನ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಸಂತೋಷ್ ಕುಮಾರ್ ಶೆಟ್ಟಿಯುವರು ವಿದ್ಯಾರ್ಥಿಗಳಿಗೆ ಕೈಗ್ಲೌಸ್ ಹಂಚುವ ಮೂಲಕ ವಿದ್ಯುಕ್ತವಾಗಿ ಚಾಲನೆ ನೀಡಿದರು.

ಸ್ವಚ್ಛ ಭಾರತ ಪರಿಕಲ್ಪನೆಯು ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಕನಸಾಗಿದ್ದು ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ. ನರೇಂದ್ರ ಮೋದಿಯವರು ಸಾಕಾರ ಮಾಡುವಲ್ಲಿ ಹೆಜ್ಜೆಯಿಟ್ಟು ಸಫಲರಾಗಿದ್ದಾರೆ ಎಂದರು.

ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್, ಸಹ




ಸಂಸ್ಥಾಪಕರಾದ ಗಣನಾಥ್ ಶೆಟ್ಟಿ ಹಾಗೂ ಸ್ಥಳೀಯರಾದ ಜಾನ್ ಪಿಂಟೋ, ಬೋಧಕ – ಬೋಧಕೇತರ ವೃಂದದವರು ಪಾಲ್ಗೊಂಡಿದ್ದರು.

## ಪದವಿ ಪೂರ್ವ ಕಾಲೇಜುಗಳ ರಾಜ್ಯಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ಲಿಖಿತ್. ಬಿ.ವೈಗೆ ಕಂಚಿನ ಪದಕ



ಲಿಖಿತ್ ಬಿ.ವೈ

ಹಾಸನ: ಪದವಿ ಪೂರ್ವ ಕಾಲೇಜುಗಳ ರಾಜ್ಯಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ಕ್ರಿಯೇಟಿವ್ ಎಜುಕೇಷನ್ ಫೌಂಡೇಶನ್ ಮೂಡುಬಿದಿರೆ (ರಿ.) ಯ ಶೈಕ್ಷಣಿಕ ಸಹಭಾಗಿತ್ವದ ಹೆಚ್. ಕೆ. ಎಸ್ ಪದವಿ ಪೂರ್ವ ಕಾಲೇಜು, ಹಾಸನ ಇಲ್ಲಿನ ವಿದ್ಯಾರ್ಥಿಯಾದ ಲಿಖಿತ್ ಬಿ.ವೈ ಕಂಚಿನ ಪದಕ ಪಡೆಯುವುದರ ಮೂಲಕ ಹಾಸನ ಜಿಲ್ಲೆಗೆ ಹೆಮ್ಮೆ ತಂದಿದ್ದಾರೆ.

ಸಾಧನೆಗೈದ ವಿದ್ಯಾರ್ಥಿಗೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹೆಚ್. ಕೆ. ಸುರೇಶ್, ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.

ಕಾವ್ಯೋಕ್ತಿ | 'ಇತ್ತು'ಗಳ ಧ್ವಜವ ಹಿಡಿದೆತ್ತಿ ನಿಲ್ಲು ಮಗೂ। 'ಇದೆ'ಯ ಹೃದಯದ್ರಾವ ಬೇಡ ನಿನಗೆ – ಎಂ ಗೋಪಾಲಕೃಷ್ಣ ಅಡಿಗ



## ಕಾನೂನು ಅರಿವು ಮೂಲಕ ನಾಗರೀಕರ ಸಬಲೀಕರಣ ಕಾರ್ಯಕ್ರಮ




ಹಾಸನ: ದಿನಾಂಕ 12.11.2022ನೇ ಶನಿವಾರದಂದು ಹೆಚ್. ಕೆ. ಎಸ್. ಪ.ಪೂ ಕಾಲೇಜಿನಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಜಿಲ್ಲಾ ಉಪನಿರ್ದೇಶಕರ ಆದೇಶದ ಮೇರೆಗೆ ಕಾನೂನು ಅರಿವು ಮೂಲಕ ನಾಗರೀಕರ ಸಬಲೀಕರಣ ಕಾರ್ಯಕ್ರಮದ ಪ್ರಯುಕ್ತ ಪೋಕ್ಸೋ ಕಾನೂನು ಬಗೆಗೆ ಜಾಗೃತಿ ಮೂಡಿಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದ ವಕೀಲರು ಮತ್ತು ಜಿಲ್ಲಾ ಆಯುಕ್ತರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ 'ಹಸಿರು ಭೂಮಿ ಸೇವಾ ಸಂಸ್ಥೆ'ಯ ಸದಸ್ಯರಾದ ಶ್ರೀಮತಿ ಎಂ.ಬಿ ಗಿರಿಜಾಂಬಿಕಾರವರು ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು, ಬಾಲ್ಯವಿವಾಹ ತಡೆ ಕಾನೂನು ಬಗೆಗೆ ವಿಸ್ತೃತ ಮಾಹಿತಿ ಇತ್ತರು. ಮುಖ್ಯ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ, ಕರ್ನಾಟಕ ನ್ಯಾಯಾಂಗ ಇಲಾಖೆಯ ಉಪನಿರ್ದೇಶಕ ಶ್ರೀಯುತ ರವಿಕುಮಾರ್ ಹೆಚ್. ಆರ್ ಪೋಕ್ಸೋ ಕಾನೂನಿನ ಬಗೆಗೆ ವಿವರಿಸುತ್ತಾ ಮಹಿಳಾ ದೌರ್ಜನ್ಯಗಳ ತಡೆಗೆ ಸಂಬಂಧಿಸಿದ ಕಾನೂನುಗಳ ಸವಿಸ್ತಾರ ಮಾಹಿತಿಯನ್ನು ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಿದರು. ಅಧ್ಯಕ್ಷೀಯ ನೆಲೆಯಲ್ಲಿ ಉಪಪ್ರಾಂಶುಪಾಲ ಆದಿತ್ಯವಟಿ ಮಾತನಾಡುತ್ತಾ ಕಾನೂನಿನ ಅರಿವಿನ ಅವಶ್ಯಕತೆಯನ್ನು ವಿವರಿಸಿದರು. ಅರ್ಥಶಾಸ್ತ್ರ ಉಪನ್ಯಾಸಕ ಮಹೇಶ್. ಕೆ.ಎನ್ ವಂದಿಸಿದರು. ಕನ್ನಡ ಉಪನ್ಯಾಸಕ ರಮೇಶ್.ಎಂ ಕಾರ್ಯಕ್ರಮ ನಿರೂಪಿಸಿದರು.

## ಕಾರ್ಕಳದ ಭಾರ್ಗವ ರಾಮ!



ಶ್ರದ್ಧೆ, ನಿಷ್ಠೆ, ಪರಿಶ್ರಮ, ಪರಾಕ್ರಮ, ಪ್ರಬುದ್ಧ, ಪರಿಶುದ್ಧ... ಹೀಗೆ ನಾನಾ ವ್ಯಕ್ತಿವಿಶೇಷತೆಗಳೆಲ್ಲವೂ ಸಮ್ಮಿಳಿತಗೊಂಡ ಅಪೂರ್ವ ವ್ಯಕ್ತಿ ಪರಶುರಾಮ. ಪುರಾಣ ಪುರಾವೆಗಳ ಪ್ರಕಾರ, ಮುನಿಶ್ರೇಷ್ಠ ಜಮದಗ್ನಿ ಹಾಗೂ ಋಷಿಪತ್ನಿ ರೇಣುಕಾದೇವಿ ಯವರ ಪುತ್ರರತ್ನರಾಗಿ ಆವಿರ್ಭವಿಸಿದ ಮಹಾವಿಷ್ಣುವಿನ ಅವತಾರ ಪರಶುರಾಮ. ಮಹಾಗಣಪತಿಯಿಂದ ಸಕಲ ವಿದ್ಯಾರ್ಜನೆ ಮಾಡಿ, ತೀರ್ಥರೂಪರ ವಚನವನ್ನು ತೀರ್ಥ ಸಮಾನವೆಂದು ಸ್ವೀಕರಿಸಿ ಹೆತ್ತಬ್ಬೆಯ ರುಂಡತರಿದರೂ, ತಂದೆಯ ತಪ: ಶಕ್ತಿಯಿಂದಲೇ ಮತ್ತೆ ತಾಯಿಯ ಪ್ರಾಣವನ್ನು ಉಳಿಸಿದ ಮಗ ಪರಶುರಾಮ. ದುಷ್ಟದಮನ ಕಾರಣ ಇಪ್ಪತ್ತೊಂದು ಬಾರಿ ಲೋಕ ಪ್ರದಕ್ಷಿಣೆ ಕೈಗೊಂಡು ಧರೆಯ ಭಾರವ ಇಳುಹಿದ ಧೀಮಂತ ಪರಾಕ್ರಮಿ. ಎಲ್ಲಕ್ಕೂ ಮಿಗಿಲಾಗಿ ನಮಗಿರುವ ಹೆಮ್ಮೆ ನಮ್ಮ ನಾಡು ಈ ತುಳುನಾಡು, ಭಗವಾನ್ ಪರಶುರಾಮರ ಸೃಷ್ಟಿಯೆನ್ನುವ ಗರಿಮೆ.

ಹಿರಿಯರೊಪ್ಪಿಸಿದ ಕಾರ್ಯ, ತಾನು ಕೈಗೊಂಡ ಕಾರ್ಯ, ಒಳಿತು ನೀಡುವ ಕಾರ್ಯ, ಅಸಾಧ್ಯವೆನಿಸಿದರೂ ಅವಶ್ಯವೆನಿಸುವ ಕಾರ್ಯ... ಹೀಗೆ ಎಲ್ಲವನ್ನ ಸಾಧಿಸಿ ತೋರಿದ ಪುರಾಣ ಪ್ರಸಿದ್ಧ ಭಾರ್ಗವನಂತೆ, ಪ್ರಸ್ತುತಕಾಲದಲ್ಲಿ ಅಂತಹುದೇ ಅಸಂಭವವೆನಿಸುವ ಅನೇಕ ಸಂಭವಗಳನ್ನು ಸಂಘಟಿಸಿ ಸಾಧಿಸಿದ "ಕಾರ್ಕಳದ ಅಭಿನವ ಭಾರ್ಗವ" ನಮ್ಮ ನೆಚ್ಚಿನ ಸಚಿವರು ಶ್ರೀ. ವಿ. ಸುನೀಲ್ ಕುಮಾರ್... ಕಲ್ಲುಬಂಡೆಗಳ ಈ ನಾಡನ್ನು ಹಚ್ಚಹಸುರಾಗಿ ಕಂಗೊಳಿಸಲು ಹಳ್ಳಿಹಳ್ಳಿಗೂ ನೀರಾವರಿ ಸೌಲಭ್ಯವನ್ನು ಕಲ್ಪಿಸಿ ಕಾರ್ಕಳದ ಉದ್ದಗಲಕ್ಕೂ ನಾಲ್ಕು ದಿಕ್ಕುಗಳಿಂದ ವಿಶಾಲವಾದ ರಸ್ತೆ ನಿರ್ಮಿಸಿ, ಶಿಕ್ಷಣ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಉನ್ನತೀಕರಿಸಿ, ಸ್ವಚ್ಛ ಕಾರ್ಕಳ, ಸ್ವರ್ಣಕಾರ್ಕಳದ ಪರಿಕಲ್ಪನೆಯೊಂದಿಗೆ ನವಕಾರ್ಕಳದ ಕನಸುಗಾರರು. ಅವರ ಅವಿರತ ಪರಿಶ್ರಮ, ಶ್ರದ್ಧೆ, ನಿಷ್ಠೆ ಇತ್ಯಾದಿಗಳ ಪ್ರತಿರೂಪವೇ ಇದೀಗ ಕಾರ್ಕಳದ ಉಮಿಕಲ್ ಗುಡ್ಡದ 500 ಅಡಿ ಎತ್ತರದ ಶಿಲೆಯ ಮೇಲೆ ಸಾರ್ವಕಾಲಿಕ ದಾಖಲೆಯಂತೆ ಕಂಗೊಳಿಸುತ್ತಿರುವ ತುಳುನಾಡಿನ ಸೃಷ್ಟಿಕರ್ತ ಶ್ರೀ ಪರಶುರಾಮರ ವಿಗ್ರಹ. ಈ ಮುಖೇನ ಪರಶುರಾಮರ ವ್ಯಕ್ತಿತ್ವವನ್ನು ಇಂದಿನ ಯುವ ಪೀಳಿಗೆಗೆ ಸಾರುವ ಅವರ ಪ್ರಯತ್ನ ಹಾಗೂ ಆಲೋಚನೆ ಶ್ಲಾಘನೀಯ.

ವಿಗ್ರಹ ರೂಪಿ ವ್ಯಕ್ತಿಯ ವ್ಯಕ್ತಿತ್ವದಂತೆ ಶ್ರೀಯುತ ವಿ. ಸುನೀಲ್ ಕುಮಾರ್ ಅವರ ವ್ಯಕ್ತಿತ್ವವೂ ಕೀರ್ತಿಯ ಬಾನೆತ್ತರಕ್ಕೆ ಏರಲಿ ಎನ್ನುವುದು ನಮ್ಮ ಆಶಯ.



**ಡಾ. ಗಣನಾಥ್ ಶೆಟ್ಟಿ**
ಸಹಸಂಸ್ಥಾಪಕರು,
ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ, ಕಾರ್ಕಳ

## ವಾಣಿಜ್ಯ ವಿದ್ಯಾರ್ಥಿಗಳಿಂದ ಚಿಕ್ಕಮಗಳೂರಿನ ಕೆಳಗೂರು ಟೀ ಫ್ಯಾಕ್ಟರಿಗೆ ಭೇಟಿ




ಹಾಸನ: ಹೆಚ್.ಕೆ.ಎಸ್. ಪಿ.ಯು ಕಾಲೇಜಿನ ವಾಣಿಜ್ಯ ವಿಭಾಗದ ವತಿಯಿಂದ ಚಿಕ್ಕಮಗಳೂರಿನ ಕೆಳಗೂರು ಟೀ ಫ್ಯಾಕ್ಟರಿಗೆ ಒಂದು ದಿನದ ಕೈಗಾರಿಕಾ ಭೇಟಿಯನ್ನು ಹಮ್ಮಿಕೊಳ್ಳಲಾಗಿತ್ತು. ಚಹಾ ಸಂರಕ್ಷಣೆ, ಪ್ಯಾಕೇಜಿಂಗ್, ಮತ್ತು ಉತ್ಪನ್ನಗಳ ತಯಾರಿಯ ಬಗ್ಗೆ ಫ್ಯಾಕ್ಟರಿ ಸಿಬ್ಬಂದಿಗಳು ಅತ್ಯುತ್ತಮ ಮಾಹಿತಿಯನ್ನೊದಗಿಸಿದರು. ಕಾಲೇಜಿನ ವಿದ್ಯಾರ್ಥಿಗಳೊಂದಿಗೆ ಉಪನ್ಯಾಸಕರುಗಳಾದ ಮಹೇಶ್.ಕೆ.ಎನ್, ಶ್ರೀಮತಿ ಅಶ್ವಿನಿ ಸಿ.ಎಲ್, ವಿಘ್ನೇಶ್ ಕಾಮತ್, ಶಿಮ್ಮಿರಾಜ್ ಜೊತೆಗಿದ್ದರು.

ಹೆಚ್.ಕೆ.ಎಸ್. ಪಿ.ಯು ಕಾಲೇಜು ವಿದ್ಯಾರ್ಥಿಗಳಿಗೆ ಕೇವಲ ಪಠ್ಯವಲ್ಲದೆ ಆಧುನಿಕ ಜಗತ್ತಿಗೆ ಅತ್ಯಾವಶ್ಯಕವಾದ ಪ್ರಾಯೋಗಿಕ ಜ್ಞಾನ ನೀಡುವ ಉದ್ದೇಶದಿಂದ ಇಂತಹ ಹಲವಾರು ಕೈಗಾರಿಕಾ ಭೇಟಿಯನ್ನು ನಿಯಮಿತವಾಗಿ ಹಮ್ಮಿಕೊಳ್ಳುತ್ತಿದೆ.

# ಕ್ರಿಯೇಟಿವ್ ಸುತ್ತಮುತ್ತ

ಪೂರ್ವದಲ್ಲಿ ಸಹ್ಯಾದ್ರಿ ಪರ್ವತ ಶ್ರೇಣಿಗಳು, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಇವುಗಳ ಮಧ್ಯದಲ್ಲಿ ನೆಲೆನಿಂತ ಪರಶುರಾಮನ ಸೃಷ್ಟಿಯ ನಾಡೆ ಒತ್ತಕ್ಷರವಿಲ್ಲದ ಮೂರಕ್ಷರದ ಉಡುಪಿ. ಉಡುಪಿ ಜಿಲ್ಲೆಯನ್ನು ಶಿಕ್ಷಣ ಕಾಶಿ, ಪ್ರಕೃತಿಯ ರಮ್ಯತಾಣವೆಂದು ಬಣ್ಣಿಸಬಹುದು. ಇದು ದೇವಾಲಯಗಳ ಬೀಡು, ಸಾಂಸ್ಕೃತಿಕ ನಾಡು ಹಾಗೂ ಪ್ರವಾಸಿಗರಿಗೆ ಸ್ವರ್ಗದಂತಿದೆ. ನಕ್ಷತ್ರಗಳ ಒಡೆಯ ಚಂದ್ರ. ಶಾಪಗ್ರಸ್ತನಾದ ಚಂದ್ರ ಶಾಪ ವಿಮೋಚನೆಗಾಗಿ ಮಿಂದೆದ್ದ ಸ್ಥಳವೇ ಈ ಸುಂದರ ಉಡುಪಿ. ದಾಸ ಶ್ರೇಷ್ಠರಾದ ಕನಕದಾಸರ ಭಕ್ತಿಗೆ ಶ್ರೀಕೃಷ್ಣನು ಒಲಿದ ನಾಡೆ ಈ ಉಡುಪಿ.

ಪ್ರಕೃತಿ ರಮಣೀಯವಾದ ಉಡುಪಿಯು ಶೈಕ್ಷಣಿಕವಾಗಿ ರಾಜ್ಯದಲ್ಲೆ ಮುಂದುವರೆದ ಜಿಲ್ಲೆಯಾಗಿದ್ದು, ಉಡುಪಿ, ಕಾರ್ಕಳ, ಹೆಬ್ರಿ, ಕಾಪು, ಕುಂದಾಪುರ, ಬ್ರಹ್ಮಾವರ ಹಾಗೂ ಬೈಂದೂರು ತಾಲೂಕು ಎಂಬ ಏಳು ತಾಲೂಕುಗಳನ್ನು ಒಳಗೊಂಡಿದ್ದು, ಅದರಲ್ಲಿ ಉಡುಪಿ ಮತ್ತು ಕಾರ್ಕಳ ತಾಲೂಕಿನಲ್ಲಿ ವಿದ್ಯಾಕಾಶಿಯಂತೆ ತಲೆಯೆತ್ತಿ ನಿಂತಿರುವ ಜ್ಞಾನ ದೇಗುಲವೇ ಈ ನಮ್ಮ ಕ್ರಿಯೇಟಿವ್ ಕಾಲೇಜ್.

**'ಕ್ರಿಯೇಟಿವ್'** ಎಂಬ ಪದಕ್ಕೆ ಕನ್ನಡ ಭಾಷೆಯಲ್ಲಿ ಪ್ರತಿಭಾವಂತ, ಕಲಾತ್ಮಕ, ಕ್ರಿಯಾಶೀಲ, ಪ್ರತಿಭೆ, ಸಾಧನೆ, ಚತುರ, ಪ್ರವೀಣ, ಸೃಜನಶೀಲ ಎಂಬ ಅರ್ಥಗಳಿವೆ. ವಿದ್ಯಾರ್ಥಿಗಳನ್ನು ಸೃಜನಶೀಲರನ್ನಾಗಿಸುವ ಸದುದ್ದೇಶದಿಂದ ಏಳು ಮಂದಿ ನುರಿತ ಉಪನ್ಯಾಸಕರು ಸೇರಿಕೊಂಡು ಸೃಷ್ಟಿಸಿದ ಸಂಸ್ಥೆಯೇ, ಕ್ರಿಯೇಟಿವ್ ಕಾಲೇಜ್. ಶೈಕ್ಷಣಿಕ ರಂಗ ಮಾತ್ರವಲ್ಲದೆ ಸಾಂಸ್ಕೃತಿಕ, ಕ್ರೀಡಾ, ಹಾಗೂ ಸ್ಪರ್ಧಾತ್ಮಕ ಕ್ಷೇತ್ರಗಳನ್ನು ಮೈಗೂಡಿಸಿಕೊಂಡು ಬೆಳೆಯುತ್ತಿರುವ ಹೆಮ್ಮೆಯ ಸಂಸ್ಥೆ ಕ್ರಿಯೇಟಿವ್ ಕಾಲೇಜು. ಪ್ರಾರಂಭದ ಪ್ರಥಮ ವರ್ಷದಲ್ಲಿ ದ್ವಿತೀಯ ಪಿಯುಸಿ ಅಂತಿಮ ಪರೀಕ್ಷೆಯಲ್ಲಿ ಪ್ರತಿಶತ ನೂರು ಶೇಕಡ ಫಲಿತಾಂಶವನ್ನು ಪಡೆದ ಏಕಮಾತ್ರ ಕಾಲೇಜು, ಕ್ರಿಯೇಟಿವ್ ಕಾಲೇಜ್. ಹಾಸನ, ಕಾರ್ಕಳ ಹಾಗೂ ಉಡುಪಿ ಹೀಗೆ ಮೂರು ಕಡೆಗಳಲ್ಲೂ ತನ್ನ ಸಂಸ್ಥೆಯನ್ನು ಪ್ರಾರಂಭಿಸಿ ಒಂದು ಉತ್ತಮ ಜ್ಞಾನಾರ್ಜನೆಯ ಕೇಂದ್ರವಾಗಿ ಹೊರಹೊಮ್ಮುತ್ತಿದೆ.

ಈ ಹೆಮ್ಮೆಯ ಕಾಲೇಜಿನ ಸಂಸ್ಥಾಪಕರುಗಳಾದ ವಿದ್ವಾನ್ ಗಣಪತಿ ಭಟ್, ಡಾ. ಗಣನಾಥ ಶೆಟ್ಟಿ, ಅಶ್ವತ್ ಎಸ್.ಎಲ್., ಆದರ್ಶ ಎಂ. ಕೆ., ಅಮೃತ್ ರೈ, ವಿಮಲ್ ರಾಜ್, ಗಣಪತಿ ಭಟ್ ಎಂಬ ಏಳು ಮಂದಿ ಅನುಭವಿ ಉಪನ್ಯಾಸಕರು ಸೇರಿಕೊಂಡು ತಮ್ಮ ಕನಸಿನ ಕೂಸಾದ ಈ ಕ್ರಿಯೇಟಿವ್ ಸಂಸ್ಥೆಯನ್ನು ಸ್ಥಾಪಿಸಿಕೊಂಡವರು. ಇಂದು ಉಡುಪಿ ಜಿಲ್ಲೆಯ ಪ್ರತಿಷ್ಠಿತ ಕಾಲೇಜುಗಳ ಪಟ್ಟಿಯಲ್ಲಿ ಅಗ್ರಪಂಕ್ತಿಯಲ್ಲಿರುವ ಕಾಲೇಜು ಕ್ರಿಯೇಟಿವ್ ಪದವಿಪೂರ್ವ ಕಾಲೇಜು.

ಉಡುಪಿಯ ಕೇಂದ್ರ ಭಾಗದಿಂದ ಸುಮಾರು ಏಳು ಕಿಲೋಮೀಟರ್ ದೂರದ ಕಲ್ಯಾಣಪುರದಲ್ಲಿ ತನ್ನ ಹೊಸ ಶಾಖೆಯನ್ನು 2022-23ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸಿದ್ದು ಒಂದು ಉತ್ತಮ ಉಪನ್ಯಾಸಕರ ತಂಡದೊಂದಿಗೆ ಸಂಸ್ಥೆಯು ಎಲ್ಲಾ ಮೂಲ ಸೌಕರ್ಯಗಳೊಂದಿಗೆ ಶಿಕ್ಷಣವನ್ನು ನೀಡುತ್ತಿದ್ದು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸೃಷ್ಟಿಸುವಲ್ಲಿ ಹಗಲಿರುಳು ಸತತ ಕಠಿಣ ಪರಿಶ್ರಮದೊಂದಿಗೆ ಬೆಳೆಯುತ್ತಿರುವ ಹೆಮ್ಮೆಯ ಸಂಸ್ಥೆಯಾಗಿ ಉಡುಪಿಯ ಕ್ರಿಯೇಟಿವ್ ಕಾಲೇಜು ಹೊರಹೊಮ್ಮುತ್ತಿದೆ.

2022 ನೇ ಸಾಲಿನ ಉಡುಪಿ ಜಿಲ್ಲೆಯ 'ಭೌತಶಾಸ್ತ್ರ ಕಾರ್ಯಗಾರ' ವನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಕೀರ್ತಿ ಉಡುಪಿಯ ಕ್ರಿಯೇಟಿವ್ ಕಾಲೇಜಿಗೆ ಸಲ್ಲುತ್ತದೆ. ಮಾತ್ರವಲ್ಲದೆ ದೀಪಾವಳಿ ಆಚರಣೆ, ಗಣೇಶ ಚತುರ್ಥಿ, ರಾಷ್ಟ್ರ ನಾಯಕರುಗಳ ಜನ್ಮ ದಿನಾಚರಣೆ, ಕ್ರಿಸ್ಮಮಸ್ ಆಚರಣೆ ಹಾಗೂ ಕನ್ನಡ ನಾಡು ನುಡಿಯನ್ನು ಬೆಳೆಸಿ ಗೌರವಿಸುವ ನಿಟ್ಟಿನಲ್ಲಿ **'ಕ್ರಿಯೇಟಿವ್ ನುಡಿಹಬ್ಬ -2022'** ಎಂಬ ಅದ್ದೂರಿ ಕಾರ್ಯಕ್ರಮವನ್ನು ಸಂಯೋಜಿಸಿಕೊಂಡು ವಿದ್ಯಾರ್ಥಿಗಳನ್ನು ಸೃಜನಾತ್ಮಕತೆಯೆಡೆಗೆ ಅವರ ಪ್ರತಿಭೆಯನ್ನು ಗುರುತಿಸುವಲ್ಲಿ ಮಹತ್ತರ ಜವಾಬ್ದಾರಿಯನ್ನು ಹೊತ್ತು ಕಾರ್ಯೋನ್ಮುಖವಾಗುತ್ತಿರುವ ಸಂಸ್ಥೆ ಕ್ರಿಯೇಟಿವ್ ಸಂಸ್ಥೆ.




ಒಂದು ಉತ್ತಮ ನುರಿತ ಉಪನ್ಯಾಸಕ ವರ್ಗವನ್ನು ಹೊಂದಿದ್ದು ಅನುಭವಿ ಪ್ರಾಂಶುಪಾಲರನ್ನು ಒಳಗೊಂಡಿರುವ ಕ್ರಿಯೇಟಿವ್ ಕಾಲೇಜು ಉಡುಪಿಯು ಸುಸಜ್ಜಿತ ಪ್ರಯೋಗಾಲಯ, ಸುಂದರ ತರಗತಿ ಕೊಠಡಿ, ಐಷಾರಾಮಿ ಹಾಸ್ಟೆಲ್ ಕೋಣೆಯನ್ನು ಹೊಂದಿದ್ದು ಹವಾನಿಯಂತ್ರಿತ ವ್ಯವಸ್ಥೆಯನ್ನು ಒಳಗೊಂಡಿದೆ. ಜೆಇಇ, ನೀಟ್, ಸಿಇಟಿ, ಕೆವಿಪಿವೈ, ನಾಟ, ಎನ್ಡಿಎ ಮುಂತಾದ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮೊದಲ ತರಗತಿಯಿಂದಲೇ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡುತ್ತಿದ್ದು, ಇದರ ದಕ್ಷತೆಯನ್ನು ನಿರ್ಧರಿಸುವ ಸಲುವಾಗಿ ಪ್ರತಿವಾರ ಈ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಕಾಲೇಜಿನಲ್ಲಿ ಪರೀಕ್ಷೆಯನ್ನು ನಡೆಸುತ್ತಾ ಬರುತ್ತಿದೆ. ದಕ್ಷತೆ, ಮೌಲ್ಯಯುತ ಶಿಕ್ಷಣಕ್ಕೆ ಪ್ರಾಶಸ್ತ್ಯವನ್ನು ನೀಡುತ್ತಿದ್ದು ಈ ವಿಚಾರದಲ್ಲಿ ರಾಜಿಯನ್ನು ಮಾಡಿಕೊಳ್ಳದೆ ಪ್ರವೇಶ ಬಯಸುವ ಪ್ರತಿ ವಿದ್ಯಾರ್ಥಿಗಳು 'ಪ್ರವೇಶ ಪರೀಕ್ಷೆ'ಯ ಮೂಲಕವೇ ಸಂಸ್ಥೆಯಲ್ಲಿ ಸೀಟು ದಕ್ಕಿಸಿಕೊಳ್ಳುವುದು ಈ ಸಂಸ್ಥೆಯ ಪಾರದರ್ಶಕತೆಗೆ ಹಿಡಿದ ಕೈಗನ್ನಡಿಯಾಗಿದೆ.

ಕಾಲೇಜಿನ ಕಚೇರಿಯು ಅನುಭವಿ ಸಿಬ್ಬಂದಿಗಳಿಂದ ಕೂಡಿದ್ದು ಸಂಸ್ಥೆಯ ಏಳಿಗೆಗೆ ಸದಾಕಾಲ ಅವಿರತ ಕೆಲಸದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಜಗತ್ತಿನ ಆಗುಹೋಗುಗಳನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕೆಂಬ ಸದುದ್ದೇಶದಿಂದ ದಿನಪತ್ರಿಕೆಯನ್ನು ಓದಲು ವಿದ್ಯಾರ್ಥಿಗಳಿಗೆ ಅವಕಾಶವನ್ನು ನೀಡಿದೆ. ಕ್ರೀಡಾ ಕ್ಷೇತ್ರದಲ್ಲೂ ವಿದ್ಯಾರ್ಥಿಗಳಿಗೆ ಅವಕಾಶವನ್ನು ನೀಡುತ್ತಿದ್ದು ನುರಿತ ತರಬೇತುದಾರರಿಂದ ನಿರಂತರ ತರಬೇತಿಯನ್ನು ನೀಡುತ್ತಾ ಕ್ರೀಡೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೇರೇಪಿಸುತ್ತಿದೆ. ವಿದ್ಯಾರ್ಥಿಗಳಿಗೆ ಬಿಡುವಿನ ವೇಳೆಯಲ್ಲಿ ಕಾಫಿ, ಟೀ ಯನ್ನು ಸವಿಯುವ ಉದ್ದೇಶದಿಂದ 'ಕ್ರಿಯೇಟಿವ್ ಕಾಫಿಕ್ಲಬ್'ನ್ನು ವಿದ್ಯಾರ್ಥಿಗಳಿಗೆ ಒದಗಿಸಿಕೊಡಲಾಗಿದೆ. ವಿದ್ಯಾರ್ಥಿಗಳ ಮಾನಸಿಕ ಸ್ಥಿರತೆಗೆ ಒತ್ತುನೀಡಿ ಅವರ ಗುಪ್ತ ಸಂದೇಹಗಳಿಗೆ ಪರಿಹಾರವನ್ನು ನೀಡುವ ನಿಟ್ಟಿನಲ್ಲಿ ವಿಶೇಷ ಸಮಾಲೋಚಕರಿಂದ ನಿರಂತರ ಆರೋಗ್ಯ ಮತ್ತು ಮಾನಸಿಕ ವಿಷಯಕ್ಕೆ ಸಂಬಂಧಪಟ್ಟಂತೆ ಸಮಾಲೋಚನೆಯನ್ನು ನಡೆಸುತ್ತಾ ಬರಲಾಗುತ್ತಿದೆ.

**'ಸಂದೇಹ ನಿವಾರಣ ಅವಧಿ'** (ಡೌಟ್ ಕ್ಲಾರಿಫಿಕೇಶನ್ ಸೆಷನ್) ಎಂಬ ಪರಿಕಲ್ಪನೆ ಕ್ರಿಯೇಟಿವ್ ಸಂಸ್ಥೆ ಸೃಷ್ಟಿಸಿರುವ ಒಂದು ಹೊಸ ಪರಿಕಲ್ಪನೆ. ಈ ಸಮಯದಲ್ಲಿ ದಿನಕ್ಕೊಂದರಂತೆ ಆರು ವಿಷಯಗಳಿಗೆ ಸಂಬಂಧಪಟ್ಟ ವಿಷಯ ಶಿಕ್ಷಕರ ಜೊತೆ ವಿದ್ಯಾರ್ಥಿಗಳು ಸಮಯ ಸಂಜೆ 6.15-8.30 ರವರೆಗೆ ಸಂದೇಹವನ್ನು ನಿವಾರಿಸಿಕೊಳ್ಳುವ ವಿಶೇಷ ಅವಧಿ ಇದಾಗಿದೆ. ಆ ಬಳಿಕ ವಿದ್ಯಾರ್ಥಿಗಳಿಗೆ ಸ್ವಅಧ್ಯಯನಕ್ಕೆ ಅವಕಾಶವನ್ನು ನೀಡಿದೆ.

ಸುಸಜ್ಜಿತ ಭೋಜನಾಲಯವನ್ನು ಹೊಂದಿರುವ ಸಂಸ್ಥೆಯು ಅನುಭವಿ ಅಡುಗೆಯವರಿಂದ ಶುಚಿ-ರುಚಿಯಾದ ಅಡುಗೆಯನ್ನು ಸಿದ್ಧಪಡಿಸಿಕೊಂಡು ವಿದ್ಯಾರ್ಥಿಗಳಿಗೆ ಉಣಬಡಿಸ ಲಾಗುತ್ತದೆ. ಬೆಳಗ್ಗಿನ ಅವಧಿಯಲ್ಲಿ ಯೋಗ ಮತ್ತು ಧ್ಯಾನಕ್ಕೆ ಮಹತ್ವವನ್ನು ನೀಡಿ ನಿರಂತರವಾಗಿ ಇದರಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ನೋಡಿಕೊಂಡು ಒಂದು ಉತ್ತಮ ಕಲಿಕೆಗೆ ಸುಂದರ ಮನಸ್ಸುಗಳನ್ನು ಸಜ್ಜುಗೊಳಿಸುತ್ತಿದೆ.

ಪ್ರತಿಭಾನ್ವಿತ ಬಡವಿದ್ಯಾರ್ಥಿಗಳನ್ನು ಗುರುತಿಸಿ ಬೆಳೆಸುವ ನಿಟ್ಟಿನಲ್ಲಿ **'ಕ್ರಿಯೇಟಿವ್ ಹೊಂಗಿರಣ'** ಎಂಬ ಯೋಜನೆಯನ್ನು ರೂಪಿಸಿದ್ದು, ಅತ್ಯಂತ ಕಷ್ಟ ಕಾರ್ಪಣ್ಯದಿಂದ ಬಳಲುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಂಪೂರ್ಣ ಉಚಿತ ಶಿಕ್ಷಣವನ್ನು ನೀಡುವ ಜೊತೆಗೆ ಅವರ ಮುಂದಿನ ಶಿಕ್ಷಣಕ್ಕೂ ನೆರವಾಗುವ ಮಹತ್ವಾಕಾಂಕ್ಷೆಯನ್ನು ಹೊಂದಿದ್ದು ಇದು ನೂರಾರು ಪ್ರತಿಭಾವಂತ ಬಡಮಕ್ಕಳಿಗೆ ಒಂದು ಆಶಾಕಿರಣವಾದ ಯೋಜನೆಯಾಗಿದೆ.



**ಸಂತೋಷ**
ಕನ್ನಡ ಉಪನ್ಯಾಸಕರು
ಕ್ರಿಯೇಟಿವ್ ಪ.ಪೂ. ಕಾಲೇಜು, ಉಡುಪಿ

ಕಾವ್ಯೋಕ್ತಿ

ಮನೆಮನೆಯಲಿ ದೀಪ ಮುಡಿಸಿ, ಹೊತ್ತು ಹೊತ್ತಿಗೆ ಅನ್ನ ಉಣಿಸಿ,
ತಂದೆ-ಮಗುವ ತಬ್ಬಿದಾಕೆ, ನಿನಗೆ ಬೇರೆ ಹೆಸರು ಬೇಕೆ, ಸ್ತ್ರೀ ಎಂದರೆ ಅಷ್ಟೇ ಸಾಕೆ.. - ಜಿ.ಎಸ್.ಶಿವರುದ್ರಪ್ಪ



# ಸಂವಿಧಾನ ದಿನಾಚರಣೆ

ಕಾರ್ಕಳ: ಕ್ರಿಯೇಟಿವ್ ಕಾಲೇಜಿನಲ್ಲಿ ನವೆಂಬರ್ 26 ರಂದು ಸಂವಿಧಾನ ದಿನಾಚರಣೆ ನಡೆಯಿತು. ಈ ಸಂದರ್ಭದಲ್ಲಿ ಭಾರತದ ಸಾರ್ವಭೌಮತೆಯ ರಕ್ಷಣೆ ಮತ್ತು ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರೂಪಿಸಲು ಸಂವಿಧಾನದ ರಚನೆಯನ್ನು ಮಾಡಲಾಯಿತು. ದೇಶದ ಪ್ರಜೆಗಳು ದೇಶದ ಕಾನೂನನ್ನು ಗೌರವಿಸಿ ಮತ್ತು ಸಂವಿಧಾನದ ಆಶಯದಂತೆ ಬದುಕನ್ನು ನಡೆಸಬೇಕು ಎಂದು ಪ್ರಾಂಶುಪಾಲರಾದ ವಿದ್ವಾನ್ ಗಣಪತಿಭಟ್ ವಿದ್ಯಾರ್ಥಿಗಳಿಗೆ ತಿಳಿಸಿದರು. ಸಂವಿಧಾನವನ್ನು ರಚನೆ ಮಾಡಬೇಕಾದರೆ ಅನೇಕ ದೇಶಗಳಲ್ಲಿರುವ ಕಾಯ್ದೆ, ಕಾನೂನುಗಳನ್ನು ಆಳವಾಗಿ ಅಧ್ಯಯನ ನಡೆಸಿ ಎಲ್ಲರಿಗೂ ನ್ಯಾಯ ಸಿಗುವಂತೆ ರಚಿಸಲಾಗಿದೆ. ಡಾ. ಬಿ.ಆರ್ ಅಂಬೇಡ್ಕರ್ ಅವರನ್ನು ಸಂವಿಧಾನ ರಚನಾ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿ ವಿಶ್ವದಲ್ಲಿಯೇ ಅತ್ಯಂತ ದೊಡ್ಡದಾದ ಲಿಖಿತ ಸಂವಿಧಾನವನ್ನು ರಚಿಸಲಾಯಿತು. ಅವರ ಆಶಯಕ್ಕೆ ಅನುಗುಣವಾಗಿ ದೇಶದ ಸಮಗ್ರತೆಯನ್ನು ಗೌರವಿಸಿ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅನುಭವಿಸಬೇಕೆಂದು ಕರೆನೀಡಿದರು. ವಿದ್ಯಾರ್ಥಿಗಳು ಸಂವಿಧಾನದ ಪೀಠಿಕೆಯ ಪ್ರತಿಜ್ಞಾವಿಧಿಯನ್ನು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಉಪನ್ಯಾಸಕರಾದ ರಾಘವೇಂದ್ರ ಬಿ ರಾವ್, ಶಿವಕುಮಾರ್, ಉಮೇಶ್, ಅಕ್ಷತಾ ಜೈನ್, ರಾಮಕೃಷ್ಣ ಹೆಗಡೆ, ಡಾ. ಆದಂಶೇಕ್, ಸಾರ್ವಜನಿಕ ಸಂಪರ್ಕ ಅಧಿಕಾರಿ ಲಿಶನ್ ಗೌಡ ಉಪಸ್ಥಿತರಿದ್ದರು.

# ಪಾಲಕ-ಶಿಕ್ಷಕರ ಸಭೆ




ಕಾರ್ಕಳ: ಕಾಲೇಜಿನಲ್ಲಿ 2022-23 ನೇ ಸಾಲಿನ ಪಾಲಕರ-ಶಿಕ್ಷಕರ ಸಭೆ ದಿನಾಂಕ 04-12-2022 ರಂದು ನಡೆಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಂಸ್ಥಾಪಕರಾದ ಅಶ್ವತ್ ಎಸ್. ಎಲ್, ಕ್ರಿಯೇಟಿವ್ ಕಾಲೇಜಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮತ್ತು ವಿವಿಧ ಚಟುವಟಿಕೆಗಳಿಗೆ ಪ್ರಾಧಾನ್ಯತೆ ನೀಡಿ ತರಬೇತಿ ನೀಡಲಾಗುತ್ತಿದೆ. ಆಯಾ ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿಯನ್ನು ಅತ್ಯಂತ ಪಾರದರ್ಶಕವಾಗಿ ಪರಿಶೀಲಿಸಿ, ಲೋಪ ದೋಷಗಳನ್ನು ಪರಿಹರಿಸಲಾಗುತ್ತಿದೆ.

ಮುಂಬರುವ NEET,CET, KVPY, NATA, NDA, IIT ಪರೀಕ್ಷೆಗಳಿಗೆ ನುರಿತ ಅನುಭವಿ ಪ್ರಾಧ್ಯಾಪಕರು ತರಬೇತಿ ನೀಡುತ್ತಿದ್ದು ವಿಶೇಷ ತರಗತಿಗಳನ್ನೂ ನಡೆಸಲಾಗುತ್ತಿದೆ. ಪಾಲಕರೂ ನಮ್ಮೊಂದಿಗೆ ಸಹಕರಿಸಬೇಕು ಎಂದುತಿಳಿಸಿದರು.

ಪ್ರಾಂಶುಪಾಲರಾದ ವಿದ್ವಾನ್ ಗಣಪತಿಭಟ್ ಮಾತನಾಡಿ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಾವು ತೀವ್ರ ಪೈಪೋಟಿ ನೀಡಬೇಕಾಗಿದೆ. ಇರುವ ಅವಕಾಶ ಉಪಯೋಗಿಸಿಕೊಳ್ಳಲು ಕ್ರಿಯೇಟಿವ್ ವಿದ್ಯಾ ಸಂಸ್ಥೆಯಲ್ಲಿ ಎಲ್ಲಾ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಸಂಸ್ಥಾಪಕರಾದ ಡಾ. ಗಣನಾಥಶೆಟ್ಟಿಯವರು ಪಾಲಕರಿಗೆ ಪ್ರಥಮ ಪಿಯುಸಿಯಿಂದ ಇಂದಿನವರೆಗೂ ನಡೆದ ವಿವಿಧ ಪರೀಕ್ಷೆಗಳ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವ ತಯಾರಿಯ ಬಗ್ಗೆ ಸವಿಸ್ತಾರ ಮಾಹಿತಿ ನೀಡಿದರು. ಸಂಸ್ಥಾಪಕರಾದ ಆದರ್ಶ ಎಂ.ಕೆ, ಅಮೃತ್ ರೈ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳ ಹೆತ್ತವರನ್ನು ಉದ್ದೇಶಿಸಿ ಮಾತನಾಡಿದ ಸಂಸ್ಥಾಪಕರಾದ ಗಣಪತಿ ಭಟ್ ಕೆ.ಎಸ್ ಇಂದು ವಾಣಿಜ್ಯ ವಿಭಾಗದ CA, CS ಕ್ಷೇತ್ರಗಳಲ್ಲಿ ಅಪರಿಮಿತ ಅವಕಾಶಗಳಿವೆ. ನಮ್ಮ ಸಂಸ್ಥೆಯಿಂದ ಅನೇಕ ವಿದ್ಯಾರ್ಥಿಗಳು ಈಗಾಗಲೇ ವಿವಿಧ ಪ್ರತಿಷ್ಠಿತ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದು, ವಿಶೇಷವಾಗಿ ತಜ್ಞ ಅಧ್ಯಾಪಕರನ್ನು ಕರೆಸಿ ಅವರಿಂದ ಪಾಠ, ಪ್ರವಚನ (ಕೋಚಿಂಗ್) ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿದ್ಯಾಸಂಸ್ಥೆಯ ಉಪನ್ಯಾಸಕರು ಸಭೆಯಲ್ಲಿ ಪಾಲ್ಗೊಂಡು ಪಾಲಕರೊಂದಿಗೆ ಸಮಾಲೋಚನೆ ನಡೆಸಿದರು. ಉಪನ್ಯಾಸಕರಾದ ಲೋಹಿತ್ ಎಸ್. ಕೆ, ವಿನಾಯಕ ಜೋಗ್, ಉಮೇಶ್ ಕಾರ್ಯಕ್ರಮ ನಿರೂಪಿಸಿ ವಂದನಾ ರ್ಪಣೆಗೈದರು.

# ಯಶಸ್ವಿಯಾಗಿ ನಡೆದ ಮೈಸೂರು ವಿಭಾಗ ಮಟ್ಟದ ಸಾಂಸ್ಕೃತಿಕ ಸ್ಪರ್ಧೆ

ಹಾಸನ: ಕರ್ನಾಟಕ ಸರ್ಕಾರ ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು, ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ, ಹಾಸನ, ಹೆಚ್.ಕೆ.ಎಸ್ ಪದವಿ ಪೂರ್ವ ಕಾಲೇಜು ಹಾಸನ ಇವರ ಸಂಯುಕ್ತಾಶ್ರಯದಲ್ಲಿ ಮೈಸೂರು ವಿಭಾಗಮಟ್ಟದ 2022-23ನೇ ಸಾಲಿನ ಸಾಂಸ್ಕೃತಿಕ ಸ್ಪರ್ಧೆಗಳನ್ನು ಹಾಸನ ಜಿಲ್ಲಾ ಉಪನಿರ್ದೇಶಕರ ಸಮರ್ಥ ನಿರ್ದೇಶನದಡಿಯಲ್ಲಿ ಬಹಳ ಅಚ್ಚುಕಟ್ಟಾಗಿ ಜರುಗಿತು.

ಕಾಂತರಾಜ್, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಹಾಸನ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಇಂದಿನ ತರಗತಿ ಬೋಧನೆ ಜೊತೆಗೆ ಇಂತಹ ಸಾಂಸ್ಕೃತಿಕ ಚಟುವಟಿಕೆಗಳಿಗೂ ಆದ್ಯತೆ ನೀಡಿದಾಗ ಮಾತ್ರ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ ಸಾಧ್ಯ, ಹಾಗೇಯೇ ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಪ್ರೇರಣೆಯಾಗಿರಿಸಿಕೊಂಡು ಸ್ಪರ್ಧೆಗಳ ಫಲಿತಾಂಶಗಳನ್ನು ಸ್ವೀಕರಿಸಬೇಕು ಎಂದು ಕಿವಿಮಾತು ಹೇಳಿದರು.

ಮಹಾಲಿಂಗಯ್ಯ ಸಿ.ಎಂ, ಉಪನಿರ್ದೇಶಕರು ಪ.ಪೂ. ಶಿಕ್ಷಣ ಇಲಾಖೆ, ಹಾಸನ ಜಿಲ್ಲೆ ಇವರು ಆಗಮಿಸಿ ಸ್ಪರ್ಧಾಳುಗಳಿಗೆ ತಮ್ಮ ಸ್ಫೂರ್ತಿದಾಯಕ ಪ್ರಾಸ್ತಾವಿಕ ಮಾತುಗಳಿಂದ ಹುರಿದುಂಬಿಸಿದರು.

ಸಭಾಧ್ಯಕ್ಷತೆ ವಹಿಸಿದ್ದ ಹೆಚ್.ಕೆ.ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ -ಜಂಟಿ ಕಾರ್ಯದರ್ಶಿ ಹೆಚ್. ಎಸ್ ಪ್ರಶಾಂತ್ ಗೌಡ ಮಾತನಾಡುತ್ತಾ ಸುಮಾರು ಎರಡು ಸಾವಿರ ವರ್ಷಗಳಿಗಿಂತಲೂ ಮಿಗಿಲಾದ ಇತಿಹಾಸವಿರುವ ಕನ್ನಡ ಸಂಸ್ಕೃತಿಯನ್ನು ಸಾರುವ ಕೆಲಸ ಇಂತಹ ಸ್ಪರ್ಧೆಗಳ ಆಯೋಜನೆಯಿಂದ ಸಾಧ್ಯವಾಗುತ್ತಿದೆ ಎಂದರು. ಜೊತೆಗೆ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ, ಕಾರ್ಕಳದ ಶೈಕ್ಷಣಿಕ ಸಹಭಾಗಿತ್ವದ ಹೆಚ್. ಕೆ.ಎಸ್. ಪಿಯು ಕಾಲೇಜಿನಲ್ಲಿ ನಿರಂತರವಾಗಿ ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರತಿಭೆಗಳನ್ನು ಬೆಳೆಸಲಾಗುತ್ತಿದೆ ಎಂದರು.

ಸಮಾರಂಭದಲ್ಲಿ ವಿವಿಧ ಜಿಲ್ಲೆಗಳ ಉಪನಿರ್ದೇಶಕರು, ಹಿರಿಯ ಪ್ರಾಂಶುಪಾಲರುಗಳು, ಪ್ರಾಂಶುಪಾಲರುಗಳ ಸಂಘದ ಪದಾಧಿಕಾರಿಗಳು, ಉಪನ್ಯಾಸಕರ ಸಂಘದ ಅಧ್ಯಕ್ಷರು ಹಾಗೂ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ ಕಾರ್ಕಳದ ಸಹಸಂಸ್ಥಾಪಕರುಗಳಾದ ಅಶ್ವತ್ ಎಸ್.ಎಲ್, ಆದರ್ಶ ಎಂ .ಕೆ, ಪ್ರಾಂಶುಪಾಲ ವಿಮಲ್ ರಾಜ್.ಜಿ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಬಳಿಕ ಮೈಸೂರು ವಿಭಾಗಕ್ಕೆ ಸೇರಿದ ಎಂಟು ಜಿಲ್ಲೆಗಳಿಂದ ಆಗಮಿಸಿದ ಸ್ಪರ್ಧಾಳುಗಳಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸ ಲಾಯಿತು. ವಿಜೇತರಿಗೆ ಸಂಜೆಯ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನ ನೀಡಿ ಗೌರವಿಸಲಾಯಿತು.

# "ಪ್ರತಿಭಾ ಪುರಸ್ಕಾರ"




ಕಾರ್ಕಳದ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನಲ್ಲಿ 'ಕ್ರಿಯೇಟಿವ್ ಆವಿರ್ಭವ್' ನ ಪ್ರಯುಕ್ತ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಕಾರ್ಯಕ್ರಮ ಪ್ರತಿಭಾ ಪುರಸ್ಕಾರ ನಡೆಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದ ಮುನಿಯಾಲು ಉದಯ ಕೃಷ್ಣಯ್ಯ ಶೆಟ್ಟಿ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಉದಯಕುಮಾರ್ ಶೆಟ್ಟಿಯವರು ಗ್ರಾಮೀಣ ಪ್ರದೇಶದಲ್ಲಿ ಇರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕ್ರಿಯೇಟಿವ್ ನಂತಹ ಸಂಸ್ಥೆಗಳು ಒಂದು ವರದಾನ. ಇಂತಹ ಸಂಸ್ಥೆಗಳಿಂದ ವಿದ್ಯೆ ಪಡೆದ ಮಕ್ಕಳು ದೇಶವೇ ಗೌರವಿಸುವ ಸಾಧನೆ ಮಾಡಲಿ ಎಂದು ಹಾರೈಸಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ ಯ ಸಿಂಡಿಕೇಟ್ ಸದಸ್ಯ ಮತ್ತು ವಕೀಲರಾದ ಎಂ.ಕೆ ಸುವ್ರತ್ ಕುಮಾರ್ ಅವರು ವಿದ್ಯಾರ್ಥಿಗಳು ತಂತ್ರಜ್ಞಾನ ಆಧಾರಿತ ಯುಗದಲ್ಲಿ ಅದಕ್ಕೆ ತಕ್ಕ ವೇಗದಲ್ಲಿ ನಮ್ಮನ್ನು ನಾವು ಹೊಂದಿಸಿಕೊಳ್ಳಬೇಕು. ಜಗತ್ತಿನ ಅನೇಕ ಸಂಸ್ಥೆಗಳ ಮುಖ್ಯ ಭೂಮಿಕೆಯಲ್ಲಿ ಭಾರತೀಯರೇ ಇದ್ದಾರೆ. ಇದು ಭಾರತೀಯರ ಶ್ರೇಷ್ಠತೆ ಎಂದು ವಿದ್ಯಾರ್ಥಿಗಳಿಗೆ ಪ್ರೇರಕ ಮಾತುಗಳನ್ನಾಡಿದರು.

ಈ ಸಂದರ್ಭದಲ್ಲಿ ಕರ್ಣಾಟಕ ಬ್ಯಾಂಕ್ ಕಾರ್ಕಳ ಶಾಖಾ ಪ್ರಬಂಧಕ ಗಿರೀಶ್ ನಾಯಕ್ ಮತ್ತು ತುಳು ಕೂಟ ಮೂಡುಬಿದ್ರೆ ಇದರ ಸ್ಥಾಪಕಾಧ್ಯಕ್ಷ ಚಂದ್ರಹಾಸ ದೇವಾಡಿಗರನ್ನು ಗೌರವಿಸ ಲಾಯಿತು.

ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸ್ಥಾಪಕ ಸದಸ್ಯರಾದ ಡಾ. ಗಣನಾಥ ಶೆಟ್ಟಿ ಪ್ರಾಸ್ತಾವಿಕ ನುಡಿಗಳೊಂದಿಗೆ ಸ್ವಾಗತಿಸಿದರು. ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಉಪನ್ಯಾಸಕರಾದ ರಾಜೇಶ್ ಶೆಟ್ಟಿ ಮತ್ತು ವಿನಾಯಕ್ ಜೋಗ್ ಬಹುಮಾನಿತ ವಿದ್ಯಾರ್ಥಿಗಳ ಪಟ್ಟಿ ವಾಚಿಸಿದರು. ಸಂಸ್ಥಾಪಕರಾದ ಅಮೃತ್ ರೈ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥಾಪಕರಾದ ಅಶ್ವತ್ ಎಸ್.ಎಲ್, ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್, ಆದರ್ಶ ಎಂ.ಕೆ, ವಿಮಲ್ ರಾಜ್.ಜಿ., ಗಣಪತಿ ಭಟ್ ಕೆ.ಎಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕನ್ನಡ ಉಪನ್ಯಾಸಕ ರಾಮಕೃಷ್ಣ ಹೆಗಡೆ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಯುವಕರು ಮಾದಕ ವ್ಯಸನಗಳಿಗೆ ದಾಸರಾಗಬಾರದು

**- ಕಾರ್ಕಳ ನಗರ ಠಾಣಾಧಿಕಾರಿ ಪ್ರಸನ್ನ ಎಂ.ಎಸ್**




ಸಮಾಜದಲ್ಲಿ ಅಪರಾಧ ಪ್ರಕರಣಗಳು ಕಡಿಮೆಯಾಗಬೇಕು ಮತ್ತು ವ್ಯಸನ ಮುಕ್ತ ಜನಾಂಗ ನಿರ್ಮಾಣದಲ್ಲಿ ವಿದ್ಯಾರ್ಥಿಗಳು ಜಾಗ್ರತರಾಗಿರಬೇಕು. ಗಾಂಜಾ, ಅಫೀಮಿನಂತಹ ಮಾದಕ ದ್ರವ್ಯಗಳು ಭವಿಷ್ಯವನ್ನೇ ನಾಶಪಡಿಸುತ್ತದೆ ಹಾಗೂ ಶಾಲಾ ಕಾಲೇಜಿನ ವಿದ್ಯಾರ್ಥಿಗಳೇ ಈ ದಂಧೆಯಲ್ಲಿರುವವರ ಗುರಿಯಾಗಿದ್ದಾರೆ. ಸುಲಭವಾಗಿ ಹಣಗಳಿಸುವ ಕಾರ್ಯಕ್ಕೆ ಮನಸ್ಸು ಮಾಡಿ ಸಿಕ್ಕಿಬಿದ್ದರೆ ಕಠಿಣ ಶಿಕ್ಷೆ ಅನುಭವಿಸಬೇಕಾಗುತ್ತದೆ. ಯುವಕರು ಮಾದಕ ವ್ಯಸನದಂತಹ ದುಶ್ಚಟಗಳಿಗೆ ಬಲಿಯಾಗಬಾರದು ಎಂದು ಕಾರ್ಕಳ ನಗರ ಠಾಣಾಧಿಕಾರಿ ಶ್ರೀ ಪ್ರಸನ್ನ ಎಂ.ಎಸ್ ವಿದ್ಯಾರ್ಥಿಗಳಿಗೆ ತಿಳಿಹೇಳಿದರು.

ಅವರು ಕಾರ್ಕಳದ ಕ್ರಿಯೇಟಿವ್ ಪದವಿಪೂರ್ವ ಕಾಲೇಜಿನಲ್ಲಿ ಅಪರಾಧ ತಡೆ ಮಾಸಾಚರಣೆ ಪ್ರಯುಕ್ತ ವಿದ್ಯಾರ್ಥಿ ಗಳನ್ನುದ್ದೇಶಿಸಿ ಮಾತನಾಡಿದರು. ಕಲಿಕಾ ಪರವಾನಗಿ, ಇನ್ಶೂರೆನ್ಸ್ ಮತ್ತು ಹೆಲ್ಮೆಟ್ ಇಲ್ಲದೆ ರಸ್ತೆಗೆ ವಾಹನಗಳನ್ನು ಇಳಿಸುವಂತಿಲ್ಲ. ಆಕಸ್ಮಿಕ ಅಪಘಾತಗಳು ನಡೆದರೆ ಜೀವ ನಷ್ಟದ ಜೊತೆಗೆ ಪರಿಹಾರವೂ ದೊರಕುವುದಿಲ್ಲ ಎಂದು ಕಿವಿ ಮಾತು ಹೇಳಿದರು.

ಪ್ರಾಂಶುಪಾಲರಾದ ವಿದ್ವಾನ್ ಗಣಪತಿಭಟ್ ಮಾತನಾಡಿ ಆರಕ್ಷಕರಿಂದ ನಮ್ಮ ಸುತ್ತಮುತ್ತಲಿನ ಪರಿಸರ ನೆಮ್ಮದಿಯಿಂದ ಬದುಕಲು ಸಾಧ್ಯವಾಗಿದೆ. ನಾವು ಆರಕ್ಷಕರಿಗೆ ಆಭಾರಿಗಳಾಗಿರ ಬೇಕಾಗಿದೆ ಎಂದು ನುಡಿದರು. ಕಾರ್ಯಕ್ರಮದಲ್ಲಿ ಆರಕ್ಷಕ ಸಿಬ್ಬಂದಿ ಘನಶ್ಯಾಮ್, ಉಪನ್ಯಾಸಕರಾದ ರಾಘವೇಂದ್ರ ರಾವ್, ಅಕ್ಷತಾ ಜೈನ್ ಉಪಸ್ಥಿತರಿದ್ದರು. ಉಪನ್ಯಾಸಕ ರಾಮಕೃಷ್ಣ ಹೆಗಡೆ ಕಾರ್ಯಕ್ರಮ ನಿರೂಪಿಸಿದರು.

ಕಾವ್ಯೋಕ್ತಿ | ನಿನ್ನೊಳಗೆ ನೀ ಹೊಕ್ಕು ನಿನ್ನ ನೀನೇ ಕಂಡು ನೀನು ನೀನಾಗು ಗೆಳೆಯ...! - ದ.ರಾ. ಬೇಂದ್ರೆ

# ಒಲವ ಕಾಣ್ಕೆ

ಮತ್ತೆ ಆಗಸದಿ ಕಾರ್ಮೋಡ ಕವಿದಿದೆ
ಮಂದ ಮಾರುತ ಹಗುರಾಗಿ ಬೀಸಿ
ಮೇಘಗಳು ಹನಿಯಾಗಿ ಸುರಿಯೆ
ಮಣ್ಣು ಧೂಳೆಲ್ಲ ಕೆಂಪು ಕಂಪಾಗಿ ಪಸರಿಸುತ
ಭೂರಮೆಯು ತಂಪಾಗಿ ತೃಪ್ತಳಾಗಿಹಳು

ಬಿಸಿಯುಸಿರು ಕುದಿಮೌನ ಆಲಾಪ
ಬಿಗುಮಾನ ಬದಿಗಿರಿಸಿ ಮಾತು ಸರಸ-ಸರಾಗ
ಮೌನ ಸಂಭಾಷಣೆ, ಹೃದಯ ಭಾಷಾರಾಗ
ಅಡಗಿರುವ ಪ್ರೇಮವ ಮಾತಿನಲಿ ಆಡದೆ
ಕಣ್ಭಾಷೆಯೇ ಸಾಕು ಒಲವಿನ ಕಾಣಿಕೆ

ಮತ್ತದೇ ದಿವ್ಯ ಮೌನೋಪಾಸನೆ
ಹೃದಯ ರಂಗಸ್ಥಳದ ಚಡಪಡಿಕೆ
ತುಸುವಾದರೂ ಕನಿಕರಿಸದೇ ಮನ
ಈ ನಿನ್ನ ವಜ್ರಾಘಾತ

ತಾಳುವಾ ಸಹನೆಯಿಲ್ಲವೆನ್ನಲ್ಲಿ
ಪರಸ್ಪರ ಎದುರಾದರೂ
ಒಮ್ಮೆ ಒಪ್ಪಿಬಿಡು, ಅಪ್ಪಿಬಿಡು
ನನ್ನ ಕನಸುಗಳ ನಾವೆಯೇರಿ

ಮೃದಂಗ ವಾದ್ಯ ನರ್ತನ ಅಂತರಾಳದಲಿ
ಬೆಂಬಿಡದ ಬೇತಾಳನಂತ ಚಿಂತೆಯ ಭೂತ
ಕಳೆದುಕೊಳ್ಳುವೆನೇ ಮನೋವಿಶ್ವಾಸ
ಶ್ವಾಸಕೋಶಕೇ ಅಪಾಯ ಶ್ವಾಸ-ನಿಃಶ್ವಾಸ


ಬದುಕಿಲ್ಲ ಎಲ್ಲ ಕನಸುಗಳು, ಕೆಲವು ಮರೀಚಿಕೆ
ಬಾಡಿ ಉದುರಿಹವು ಕೆಲವು
ಭಾರ ತಡೆಯದೆ ತೊನಲಿ, ಕನಲಿ, ಜೀಕಿ
ಕೊನೆಗೊಂದು ಹೂಂಕಾರ...ಗೆದ್ದ ಝೇಂಕಾರ...



**ರಾಮಕೃಷ್ಣ ಹೆಗಡೆ**
ಕನ್ನಡ ಉಪನ್ಯಾಸಕರು
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ



# ನಾವು ಮತ್ತು ಆರಂಭ



**ಉದ್ಯಮೇನ ಹಿ ಸಿಧ್ಯಂತಿ ಕಾರ್ಯಾಣಿ ನ ಮನೋರಥೈಃ**
**ನ ಹಿ ಸುಪ್ತಸ್ಯ ಸಿಂಹಸ್ಯ ಪ್ರವಿಶಂತಿ ಮುಖೇ ಮೃಗಾ:**

ಯಾವಾತ ಕಠಿಣ ಪರಿಶ್ರಮದಿಂದ ಕಾರ್ಯೋನ್ಮುಖನಾಗುತ್ತಾನೋ ಆತನಿಗೆ ಯಶ ಸಿಗುವುದೇ ಹೊರತು, ಬರಿದೆ ಯೋಚಿಸುವವನಿಗಲ್ಲ.

ಸಿಂಹವೊಂದು ಬರಿದೆ ಕುಳಿತು ಆಲೋಚಿಸಿದರೆ ಬೇಟೆಯು ತಾನಾಗಿ ಬಂದು ಬಾಯಿಗೆ ಬೀಳಲಾರದು. ಬಹುಶ: ನಮ್ಮ ಜೀವನದಲ್ಲಿಯೂ ಹಲವು ಬಾರಿ ಅಲ್ಲದಿದ್ದರೂ, ಕೆಲವು ಬಾರಿ ಇಂತಹ 'ಅಂತೆ' ಕಾರಣಗಳಿಂದ ಅದೆಷ್ಟೋ ಯೋಚನೆಗಳನ್ನು, ಯೋಜನೆಗಳನ್ನು ಕೈಬಿಟ್ಟಿರಬಹುದು. ಒಮ್ಮೆ ಸುಮ್ಮನೆ ಕುಳಿತು ಲೆಕ್ಕಹಾಕಿ. ಒಮ್ಮೆಗೆ ಹತ್ತು ಹಲವಾರು, ನೆನೆ ಗುದಿಗೆ ಬಿದ್ದು ಉದ್ಧರಣಕ್ಕಾಗಿ ಕಾಯುತ್ತಾ, ಶಿಥಿಲಾವಸ್ಥೆಯಲ್ಲಿರುವ ಯೋಜನೆಗಳು ಕಣ್ಣ ಮುಂದೆ ಹಾದು ಹೋಯಿತು ಅಲ್ಲವೇ!?. ಹಾಗಿದ್ದರೆ ಅದಕ್ಕೆ ಕಾರಣಗಳೇನು? ನಾವು ಕೊಡುವ ಸಬೂಬುಗಳು ಸಾವಿರಾರಿದ್ದರೂ, ಮುಖ್ಯ ಕಾರಣ ಆರಂಭಿಕ ಭಯ.

ಇದು ನನ್ನಿಂದ ಸಾಧ್ಯವೇ? ಈ ಕಾರ್ಯ ಆರಂಭ ಮಾಡಿದರೆ ಉಳಿದವರು ಏನಾದರೂ ಅಂದಾರೇ? ಆರಂಭಿಸಿದಲ್ಲಿ ಮುಂದುವರೆಸಲು ಸಾಧ್ಯವೇ? ಎಂಬಿತ್ಯಾದಿ ಭಯಗಳು. ಇನ್ನೂ ಮುಂದುವರೆದ ನೆಪ ಎಂದರೆ ಈಗ ಗ್ರಹಚಾರ ಸರಿಯಿಲ್ಲ, ಮುಂದೆ ನೋಡೋಣ ಎಂಬ ಮಹಾಜ್ಞಾನದ ಮೊಂಡುವಾದ.

ಕಾಶಿಯಲ್ಲಿ ಮಹಾನ್ ಜ್ಯೋತಿಷಿಯೊಬ್ಬರಿದ್ದರಂತೆ. ಹಲವಾರು ಜನ ಅವರಲ್ಲಿ ಜೀವನದ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ಬರುತ್ತಿದ್ದರು. ಜ್ಯೋತಿಷಿಗಳೋ, ಕೇವಲ ಜ್ಯೋತಿಷ್ಯಾಸ್ತ್ರ ಪರಿಣತರಲ್ಲದೆ, ಮನೋವ್ಯಾಕುಲ ಚಿಕಿತ್ಸಕರೂ ಆಗಿದ್ದರು. ಹಾಗಾಗಿ ಕೇವಲ ಜ್ಯೋತಿಷಿಕವಾಗಿಯಲ್ಲದೆಯೂ, ಜೀವನದಲ್ಲಿ ಸೋತವರಿಗೆ ಧೈರ್ಯದ ನುಡಿಗಳನ್ನೂ ಹೇಳುತ್ತಿದ್ದುದರ ಪರಿಣಾಮ ಬಹುಜನರ ಅಭಿಮಾನಗಳಿಸಿದ್ದರು. ಒಂದು ದಿನ ಓರ್ವ ವ್ಯವಹಾರಿ ಓಡೋಡಿ ಬಂದು ಶ್ರೀಯುತರ ಕಾಲಿಗೆ ನಮಸ್ಕರಿಸಿ ಕೇಳಿದ, " ಗುರುಗಳೇ, ನಾನೊಂದು ಹೊಸ ಉದ್ಯಮವನ್ನು ಆರಂಭಿಸಬೇಕೆಂದಿದ್ದೇನೆ. ನನಗೆ ಈ ಉದ್ಯಮ ಆರಂಭಿಸಲು ಒಂದೊಳ್ಳೆಯ ದಿನವನ್ನು ತಿಳಿಸಿ". ಗುರುಗಳು ಈತನ ಜನ್ಮ ಕುಂಡಲಿ ನೋಡಿ " ಇದು ನಿನಗೆ ಹಿಡಿಸದು. ನೀನು ಆರಂಭಿಸಬೇಡ, ಈಗ ಇರುವ ವ್ಯವಹಾರವೇ ಸೂಕ್ತ" ಅಂದರು. ಆತ, ಮಾತೇ ಆಜ್ಞೆ ಎಂಬಂತೆ ಮರು ಮಾತಾಡದೆ ತೆರಳಿದ. ಅದೇ ಹೊತ್ತಿಗೆ ಮತ್ತೋರ್ವ ವ್ಯವಹಾರಿ ಬಂದು ಅದೇ ರೀತಿ ಗುರುಗಳ ಪಾದಕ್ಕೆ ನಮಸ್ಕರಿಸಿ ಕೇಳಿದ " ಗುರುಗಳೇ, ನಾನು ನಾಳೆಯು ದಿನ ಹೊಸ ವ್ಯವಹಾರ ಆರಂಭಿಸುತ್ತಿದ್ದೇನೆ. ಅದಕ್ಕಾಗಿ ನಿಮ್ಮ ಆಶೀರ್ವಾದಬೇಕು". ಗುರುಗಳು ಈತನ ಕುಂಡಲಿಯನ್ನೊಮ್ಮೆ ಕಂಡು "ಬಹಳ ಚೆನ್ನಾಗಿದೆ, ನೀನು ಆರಂಭಿಸು. ನಿನಗೆ ಯಶಸ್ಸು ಸಿಗಲಿದೆ" ಅಂದುಬಿಟ್ಟರು. ಆತನು ಹರ್ಷಚಿತ್ತನಾಗಿ ತೆರಳಿದ. ಇದೆಲ್ಲವನ್ನು ತದೇಕ ಚಿತ್ತದಿಂದ ಗಮನಿಸುತ್ತಿದ್ದ ಶಿಷ್ಯೋತ್ತಮನಿಗೆ ಆಶ್ಚರ್ಯವಾಯಿತು. ಕುತೂಹಲದಿಂದ ಗುರುಗಳಿಗೆ ಕೇಳಿದ " ಗುರುಗಳೇ ಇಬ್ಬರ ಕುಂಡಲಿಯೂ ಒಂದೇ ರೀತಿ ಇತ್ತು. ಏನೂ ವ್ಯತ್ಯಾಸ ಇರಲಿಲ್ಲ, ಆದರೂ ಇಬ್ಬರಿಗೆ ಬೇರೆ ಬೇರೆ ರೀತಿ ಉತ್ತರ ಕೊಟ್ಟರಿ! ಇದು ತಪ್ಪಲ್ಲವೇ?". ಗುರುಗಳು ನಗುತ್ತಾ ಉತ್ತರಿಸಿದರು, "ಮಗೂ, ಮೊದಲನೆಯವನಿಗೆ ತಾನು ಮಾಡುವ ಕಾರ್ಯದಲ್ಲಿ ಪೂರ್ಣ ಪ್ರಮಾಣದ ಭರವಸೆ ಇರಲಿಲ್ಲ. ಅದಕ್ಕಾಗಿ ಕಾರ್ಯಾರಂಭಕ್ಕೆ ಒಳ್ಳೆಯ ದಿನ ಕೇಳಿದ. ಮುಂದೊಂದು ದಿನ ಸಮಸ್ಯೆ ಬಂದರೆ, ಅದನ್ನು ಪರಿಹರಿಸುವ ಬದಲಾಗಿ ದಿನ ಹೇಳಿದ ನನಗೋ ಅಥವಾ ಹಣೆಬರಹಕ್ಕೆ ದೂರಿಕೊಂಡು ಕೆಲಸ ನಿಲ್ಲಿಸುತ್ತಾನೆ, ವಿಫಲನಾಗುತ್ತಾನೆ. ಎರಡನೆಯಾತ ಹಾಗಲ್ಲ ಆತನಿಗೆ ತಾನು ಮಾಡುವ ಕಾರ್ಯ ಮತ್ತು ಹಾಕುವ ಪರಿಶ್ರಮ ಎರಡರಲ್ಲೂ ನಂಬಿಕೆ ಇತ್ತು. ಹಾಗಾಗಿ ದಿನ ಕೇಳಲಿಲ್ಲ, ಬದಲಾಗಿ ಆಶೀರ್ವಾದವನ್ನಷ್ಟೇ ಕೇಳಿದ. ಮುಂದೊಂದು ದಿನ ಸಮಸ್ಯೆ ಬಂದರೆ ತನ್ನ ಪ್ರಯತ್ನದಿಂದ ಪರಿಹರಿಸಲು ಯತ್ನಿಸುತ್ತಾನೆ ಮತ್ತು ಗೆಲ್ಲುತ್ತಾನೆ. ಅದಕ್ಕಾಗಿ ಮೊದಲಿಗನಿಗೆ ಬೇಡವೆಂದೆ, ಎರಡನೆಯವನಿಗೆ ಸಾಧ್ಯ ಎಂದೆ"

ನಾವುಗಳು ಕೂಡ ಹೀಗೆಯೇ. ನಾವು ಮಾಡುವ ಕಾರ್ಯಗಳ ಕುರಿತು ಶಂಕೆಗಳನ್ನೇ ಮಾಡುತ್ತಾ ಕುಳಿತರೆ ಯಶಸ್ಸು ಅಸಾಧ್ಯ. ಈಜುವ ಛಾತಿ ಇದೆಯೇ ಧುಮುಕಿ, ಯಶಸ್ಸು ಖಂಡಿತ. ಇಂದಿನ ಅಗ್ರಮಾನ್ಯ ಸಾಧಕರೂ ಒಂದು ಕಾಲದಲ್ಲಿ ಏನೂ ಅರಿಯದ ಎಳೆಯರು ಎಂಬುದು ಸಾರ್ವಕಾಲಿಕ ಸತ್ಯ. ಹಾಗಿದ್ದರೆ, ನೆನೆಗುದಿಗೆ ಬಿದ್ದ ನಮ್ಮ ಯೋಜನೆ ತುಕ್ಕು ಹಿಡಿಯುವ ಮೊದಲು ಅದರ ಕುರಿತು ಒಮ್ಮೆ ಆಲೋಚಿಸೋಣವೇ?

**ಮಹೇಶ್ .ಕೆ.ಎನ್. ಪುತ್ತೂರು**
ಅರ್ಥಶಾಸ್ತ್ರ ಉಪನ್ಯಾಸಕರು
ಹೆಚ್.ಕೆ.ಎಸ್ ಪ.ಪೂ. ಕಾಲೇಜು, ಹಾಸನ



## ಅಭ್ಯಾಗತ

# 'ಕ್ರಿಯೇಟಿವ್ ಪತಂಗ'

'ಕ್ರಿಯೇಟಿವ್'...ಅಬ್ಬಾ ಅವನಂತಹ ಕ್ರಿಯೇಟಿವ್ ಮತ್ತೊಬ್ಬನಿಲ್ಲ... ಒಂದರಿಂದ ಮತ್ತೊಂದು ಸಂಪೂರ್ಣ ಭಿನ್ನ... ಅದೆಷ್ಟೋ ಅನ್ನುವಷ್ಟು ವಿಭಿನ್ನ... ಅವನ ಸೃಷ್ಟಿಯೆಲ್ಲವೂ ಅತ್ಯದ್ಭುತ... ಅವನೇ 'ಸೂಪರ್ ನಾಚುರಲ್ ಪವರ್' ಅಂತೀವಲ್ಲಾ... "ಭಗವಂತ"!

ಆದ್ಯಂತ್ಯ ರಹಿತವಾದ ಈ ವಿಶ್ವದಲ್ಲಿ ಭೂಮಿ ಎನ್ನುವುದು ಕೇವಲ ಬಿಂದುವಷ್ಟೆ. ಆ ಬಿಂದುವಿನೊಳಗೆ ಅವನಿಟ್ಟ ವೈವಿಧ್ಯತೆಗಳು ಅಗಾಧ ಸಿಂಧುವಿಗೂ ಮಿಗಿಲಾದದ್ದು... ಅವನ ಸೃಜನಶೀಲತೆ ಅಂತದ್ದು! ಅದಕ್ಕಲ್ಲವೇ ಅವನು 'ಸವ್ಯಸಾಚಿ' ಎಂದೆನಿಸಿದ್ದು!

ದೈವಸೃಷ್ಟಿಯಲ್ಲಿ ಪ್ರತಿಯೊಂದು ವೈಶಿಷ್ಟ್ಯಪೂರ್ಣವಾದುದೇ... ಹಕ್ಕಿಗಳ ಕಲರವ, ಸುಮಗಳ ಸೌಗಂಧ, ಅವುಗಳ ವರ್ಣಾಲಂಕಾರ... ಎಲ್ಲವೂ ಒಂದಕ್ಕಿಂತ ಒಂದು ಭಿನ್ನ ಮತ್ತು ಅದ್ಭುತ.

ಸೌಂದರ್ಯವೆಂದಾಕ್ಷಣ ನೆನಪಾಗುವುದು ಹೂವುಗಳು ಮತ್ತು ಪಕ್ಷಿಗಳು... ಅವುಗಳ ಸಾಲಿಗೆ ಸೇರುವ ಮತ್ತೊಂದು ವರ್ಗವಿದೆ... ಅವುಗಳೇ ಕೀಟಗಳು! ಬೇಡ... ಬೇಡ... ಕೀಟವೆಂದರೆ ಓರೆನೋಟ ಬೀರುವವರೇ ಜಾಸ್ತಿ... ಬಣ್ಣ ಬಣ್ಣದ ಚಿಟ್ಟೆಗಳು... ಪತಂಗಗಳು... ಓಹ್... ಚಿಟ್ಟೆ, ಪತಂಗವೆಂದಾಕ್ಷಣ ಮತ್ತೆ ಸೌಂದರ್ಯಕ್ಕಾಗಿ ಹುಡುಕಾಟ ಬೇಕಿಲ್ಲ... ಯಾಕೆಂದರೆ ಅವುಗಳ ಮೈಮಾಟವೇ ಹಾಗೆ!



ಸಾಹಿತ್ಯಸಾಕು... ವಿಜ್ಞಾನಕ್ಕೆ ಸ್ವಲ್ಪ ಹೋಗೋಣ... ನಾನು ಹೇಳ ಹೊರಟಿರುವುದು ಪತಂಗಗಳ ಬಗ್ಗೆ...

ಒಟ್ಟು ಜೀವ ಸಂಕುಲದಲ್ಲಿ ಪ್ರಾಣಿಗಳ ಪಾಲು ಶೇಕಡಾ 70 ರಷ್ಟು. ಅದರಲ್ಲಿ ಶೇಕಡಾ 70ರಷ್ಟು ಕೀಟಗಳದ್ದೇ ಸಿಂಹಪಾಲು! ಅಂದರೆ, ಈ ಭೂಮಿಯಲ್ಲಿ ಹತ್ತು ಪ್ರಾಣಿಗಳನ್ನು ಒಟ್ಟಾರೆಯಾಗಿ ಆರಿಸಿಕೊಂಡರೆ ಅದರಲ್ಲಿ ಏಳು ಕೀಟಗಳಿರುತ್ತವೆ. ಕೀಟಗಳೆಲ್ಲವೂ ಹಾನಿಕಾರಕಗಳಲ್ಲ, ಹಾಗೆ ನೋಡಿದರೆ ನಮ್ಮ ಬದುಕು ಕೀಟಗಳಿಗೆ ಅವಲಂಬಿತವಾಗಿದೆ. ಸಸ್ಯಗಳಲ್ಲಿ ಪರಾಗ ಸ್ಪರ್ಶ ಮಾಡುವ ಅತೀ ದೊಡ್ಡ ಕಾರ್ಯ ಜೇನು ನೊಣಗಳದ್ದು. ಅವುಗಳು ಪರಾಗ ಸ್ಪರ್ಶ ಮಾಡಿದಿದ್ದರೆ ಸಸ್ಯಸಂಕುಲ ಸಂತಾನಾಭಿವೃದ್ಧಿಯಿಲ್ಲದೆ ವಿನಾಶ ಹೊಂದಬಹುದು... ಸಸ್ಯವಿಲ್ಲ ಎಂದಾದರೆ ಉಳಿದ ಯಾವ ಜೀವರಾಶಿಗಳಿಗೂ ಉಳಿಗಾಲವಿಲ್ಲ. ಜೇನು ನೊಣಗಳು ಅಂತಹ ಮಹತ್ವ ಪಡೆದ ಕೀಟ ಈ ಭುವಿಯಲ್ಲಿ!

ಮೊದಲೇ ಹೇಳಿದಂತೆ ಕೀಟ ಪ್ರಬೇಧಗಳ ಸಂಖ್ಯೆ ಈ ಭೂಮಿಯಲ್ಲಿ ಲೆಕ್ಕಕ್ಕೆ ಸಿಗದಷ್ಟು ಸಮೀಕ್ಷೆಗಳ ಪ್ರಕಾರ ಕೇವಲ ಅಮೆಜಾನ್ ಕಾಡೊಂದರಲ್ಲೇ ಸುಮಾರು ಎರಡು ಮಿಲಿಯನ್ ಗಿಂತ ಹೆಚ್ಚು ಕೀಟಗಳು ಇನ್ನೂ ಪತ್ತೆ ಹಚ್ಚಿ, ಅಧ್ಯಯನ ಮಾಡಿ ಹೆಸರಿಡಲು ಬಾಕಿ ಆಗಿವೆ. ಇದುವರೆಗೆ ಅಧ್ಯಯನ ಮಾಡಿರುವ ಎಲ್ಲಾ ರೀತಿಯ ಜೀವ ಸಂಕುಲಗಳ ಒಟ್ಟು ಸಂಖ್ಯೆ 1.7 ರಿಂದ 1.8 ಮಿಲಿಯನ್ ಅಷ್ಟೇ ಎನ್ನುವುದು ಗಮನಾರ್ಹ ಸಂಗತಿ!

ಈಗ ಚಿತ್ರದಲ್ಲಿ ಕಾಣುವ ಕಥಾ ನಾಯಕನ ಬಗ್ಗೆ ಮಾತಾಡೋಣ. ಅಂದ ಹಾಗೆ ಮೇಲೆ ಕಾಣುವ ಚಿತ್ರ "ಗೂಗುಲಮ್ಮ" ಕೊಟ್ಟದಲ್ಲ! ಮೊಬೈಲಾರೆ ತೆಗೆದ ಚಿತ್ರ...ಅದೂ ಕ್ರಿಯೇಟಿವ್ ಕ್ಯಾಂಪಸ್ನಲ್ಲೆ! ಯಾವುದೋ ಒಂದು ಕೀಟವಾಗಿದ್ದರೆ ಭಾವಚಿತ್ರ ತೆಗೆಯುತ್ತಿರಲಿಲ್ಲವೇನೋ! ಆದರೆ ಇದರ ಭಾವಚಿತ್ರ ತೆಗೆಯುವುದು ಸುಲಭವಲ್ಲ! ಯಾಕೆಂದರೆ ಇದು ಸುಲಭವಾಗಿ ದಕ್ಕುವ ಪತಂಗವಲ್ಲ! ಅದೊಂದು ದಿನಪತ್ರಿಕೆಯಲ್ಲಿ ಒಂದು ಸುದ್ದಿ ಓದಿದ್ದೆ. ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ವಿಶೇಷ ಪತಂಗವೊಂದು ಪತ್ತೆ ಎಂದು ಚಿತ್ರಸಹಿತ ವರದಿ ಬಂದಿತ್ತು. ಅದಾದ ಎರಡೇ ದಿನಕ್ಕೆ ನಮ್ಮ ಕಾಲೇಜು ಕ್ಯಾಂಪಸ್‌ನ 'ಆಸರೆ' ವಿದ್ಯಾರ್ಥಿನಿ ನಿಲಯದ ಗೋಡೆಯಲ್ಲಿ ಆಸರೆ ಪಡೆದಿತ್ತು. ಅದೇ ರೀತಿಯ ಪತಂಗ!

ಸಂಸ್ಥೆಯ ಸಂಸ್ಥಾಪಕರಾದ ಗಣನಾಥ ಸರ್ ಅವರ ಮೊಬೈಲ್‌ನಲ್ಲಿ ಆಗತಾನೇ ಸೆರೆಯಾಗಿತ್ತು ಅದರ ಚಿತ್ರ. ಆಸರೆಯ ತುತ್ತ ತುದಿಯಲ್ಲಿದ್ದ ಸ್ಟಡಿಹಾಲ್‌ಗೂ ಸ್ಪಷ್ಟವಾಗಿ ಕಾಣಿಸುತ್ತಿತ್ತು ಆ ಪತಂಗ ವಿದ್ಯಾರ್ಥಿಗಳನ್ನು ಓಡಿಸಿ... ಅಲ್ಲ...ಓದಿಸಿ ಓಡೋಡಿ ಬಂದು ನಾನೂ ಒಂದು ಚಿತ್ರ ತೆಗೆದೆ ಅದುವೇ ಇದು!

ರೆಕ್ಕೆ ತುದಿಗಳು ನಾಗರ ಹಾವಿನಂತಿದೆ. ಆದ್ರೆ ಬುಸುಗುಡುವ ಹಾವಲ್ಲ, ನೇರಳೆ, ಕಂದು, ಕೆಂಪು ಹೀಗೆ ವರ್ಣಮಯ ಚಿತ್ತಾರದ ಪತಂಗ. ಅದು ಅಪರೂಪದಲ್ಲಿ ಅಪರೂಪವಾಗಿ ಕಾಣಸಿಗುವ ಏಷ್ಯಾದಲ್ಲಿಯೇ ಅತೀ ದೊಡ್ಡ ಪತಂಗ ಪ್ರಭೇದಕ್ಕೆ ಸೇರಿದ ಅಟ್ಲಾಸ್ ಪತಂಗ. ಇದರ ಜೈವಿಕ ಹೆಸರು "Attacus atla" ಅಂತ. ಇದನ್ನು ಮೊದಲ ಬಾರಿಗೆ ಹೆಸರಿಸಿದ್ದು ಜೈವಿಕ ವರ್ಗೀಕರಣದ ಪಿತಾಮಹನಾದ ಕೆರೋಲಸ್ ಲಿನೇಯಸ್ ಅದೂ 1758 ರಲ್ಲಿ. ಏಷ್ಯಾದಲ್ಲಿಯೇ ಅತೀ ದೊಡ್ಡ ಪತಂಗ ಇದಾಗಿದ್ದು ಸುಮಾರು 10 ರಿಂದ 12 ಇಂಚುಗಳಷ್ಟು ದೊಡ್ಡದಾಗಿದೆ. ಆದರೆ ಈ ಪತಂಗಗಳು ಕೇವಲ 10 ರಿಂದ 15 ದಿನ ಬದುಕುವ ಅಲ್ಪಾವಧಿಯ ಕೀಟ.

ಬೆಳಕಿಗೆ ಆಕರ್ಷಿಸಲ್ಪಡುವ ಈ ಪತಂಗಗಳಿಗೆ ವಿರೋಧಿಗಳು ಹೆಚ್ಚು ಹಾಗಾಗಿ ರೆಕ್ಕೆಗಳು ಸುಳಿಗಳು ನಾಗರ ಹಾವಿನ ತಲೆಗೆ ಹೋಲುತ್ತಿದ್ದು, ಯಾವುದಾದರೂ ಪ್ರಾಣಿ ಅಥವಾ ಜಂತುಗಳ ರೀತಿಯಲ್ಲಿ ಕಾಣುವಂತೆ ಮಾಡಿ ಶತ್ರುಗಳಿಂದ ತಪ್ಪಿಸಿಕೊಳ್ಳುತ್ತದೆ.

ಅಂದ ಹಾಗೆ ನೆನಪಿಡಿ... ಇದು ಚಿಟ್ಟೆಯಲ್ಲ... ಪತಂಗ. ಆಂಗ್ಲಭಾಷೆಯಲ್ಲಿ ಮಾಥ್ (Moths) ಎಂದು ಕರೆಯುತ್ತಾರೆ.
ಹೀಗೆ ವಿರಳಾತಿ ವಿರಳವಾಗಿರುವ ಈ ಪತಂಗಗಳನ್ನು ಬನ್ನೇರುಘಟ್ಟ ಉದ್ಯಾನವನದಲ್ಲಿ ವಂಶಾಭಿವೃದ್ಧಿ ಮಾಡಿಸುವ ಸಲುವಾಗಿ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ. ಹಾಗಾಗಿ ಮುಂದಿನ ದಿನಗಳಲ್ಲಿ ಪ್ರಕೃತಿಯ ಸಹಜ ಸೌಂದರ್ಯದ ಒಂದು ಪ್ರಭೇದವನ್ನು ಇನ್ನಷ್ಟು ಕಾಣಬಹುದು.

ಒಟ್ಟಿನಲ್ಲಿ, ಸೃಜನಾತ್ಮಕತೆಯಿಂದ ಕೂಡಿರುವ ಈ ಭುವಿಯಲ್ಲಿ ನೈಸರ್ಗಿಕ ಸೌಂದರ್ಯವನ್ನು ಸಹಜವಾಗಿ ಅನುಭವಿಸುವ ಯೋಗ ನಮಗೆ ಸಿಗಬೇಕಾದರೆ ಅದರ ಕುರಿತಾಗಿ ಪ್ರೀತಿಯಿರಬೇಕು. 'Biodiversity and its conservation' ಎಂಬ ಪಾಠವನ್ನು ಬಾಯಿಪಾಠ ಮಾಡಿ ಪರೀಕ್ಷೆಯಲ್ಲಿ ಉತ್ತರ ಬರೆದೋ ಇಲ್ಲ OMR ನಲ್ಲಿ ಚುಕ್ಕೆ ಇಟ್ಟೋ ಮಾರ್ಕ್ ಮೇಲೆ ಮಾರ್ಕ್, ರ‍್ಯಾಂಕ್ ಮೇಲೆ ರ‍್ಯಾಂಕ್ ಗಳಿಸಿದರಷ್ಟೇ ಜೀವನ ಸಾರ್ಥಕವಾಗುವುದಿಲ್ಲ. ಸಕಲ ಜೀವರಾಶಿಗಳಿಗೂ ಬದುಕುವ ಹಕ್ಕಿದೆ ಎನ್ನುವುದನ್ನು ಅರಿತು ಅವುಗಳನ್ನು ಅಳಿಸದೆ ಉಳಿಸುವುದು ನಮ್ಮ ಕರ್ತವ್ಯ. ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗೋಣ.

**ಲೋಹಿತ್ ಎಸ್. ಕೆ**
ಜೀವಶಾಸ್ತ್ರ ಉಪನ್ಯಾಸಕರು
ಕ್ರಿಯೇಟಿವ್ ಪ.ಪೂ ಕಾಲೇಜು, ಕಾರ್ಕಳ



ಕಾವ್ಯೋಕ್ತಿ | ತಿದ್ದಿಕೊಳೊ ನಿನ್ನ ನೀಂ; ಜಗವ ತಿದ್ದುವುದಿರಲಿ । ತಿದ್ದಿಕೆಗಮೊಂದು ಮಿತಿಯುಂಟು ಮರೆಯದಿರು ॥ – ಡಿ.ವಿ.ಜಿ



## ದಾರಿ

ಬದುಕು ಅಪ್ಪ ಅಮ್ಮ ಕೊಟ್ಟ ಭಿಕ್ಷೆ
ಭಗವಂತ ನೀ ಕೊಡು ರಕ್ಷೆ
ಯಾಕೆ ಕೊಟ್ಟೆ ಈ ಪರೀಕ್ಷೆ

ಕ್ರೂರವಾಗಿದೆ ಜಗತ್ತು
ಅದರೊಂದಿಗೆ ನೀ ಬದುಕಬೇಕು ಇವತ್ತು
ಎತ್ತು ನಿನ್ನ ಕತ್ತು
ಗೆಲುವಿನ ಹಿಂದೆ ಹಾಕು ಪ್ರದಕ್ಷಿಣೆಯ ಸುತ್ತು

ಬಂದೆನು ನನ್ನಯ ದಾರಿಯ ಹುಡುಕಲು
ಕೊಟ್ಟಿತು ಕ್ರಿಯೇಟಿವ್ ನನಗೊಂದು ಗುಡಿಸಲು
ಅಂದಿದೆ ನನಗೆ ಹಳೆಯದನೆಲ್ಲ ಮರೆಯಲು
ಕೊಟ್ಟಿತು ಬದುಕಿಗೆ ಸ್ಫೂರ್ತಿಯ ಹೊನಲು
ಜೀವನವಾಗಿದೆ ಈಗ ಸಂತಸದ ಕಡಲು

ಬೆಳೆದೆನು ಅಣ್ಣನ ತೆಕ್ಕೆಯಲ್ಲಿ
ಕೊಟ್ಟೆನು ಗುದ್ದು ಅವನ ಪಕ್ಕೆಯಲ್ಲಿ
ಅವನಿಲ್ಲದೆ ನಾನಿರುವೆ ದುಃಖದಲ್ಲಿ
ನಾನ್ಯಕಿಲ್ಲ ಈಗ ಅವನ ಪಕ್ಕದಲ್ಲಿ

## ಮುಸುಕು

ಕರೆಯಲು ಬರಲಿಲ್ಲ ಯಾರು ಗೆಲುವನು ನೋಡಲು
ನಾನೆ ಹೊರಟೆ ನೋಡಲು ಅದರ ನಿಲುವನು
ಕಂಡಿತು ಮಂಜಿನ ಮುಸುಕಿನ ರೀತಿ
ನನಗಾಯಿತು ಅದು ಸಿಗುವುದಿಲ್ಲ ಎನ್ನುವ ಭೀತಿ
ಭಯದಿಂದ ಕುಳಿತರೆ ಆಗದು ಕೆಲಸ ಈ ರೀತಿ
ಹಾಗಾಗಿ ನಾನೆ ಮಾಡಿದೆ ಗೆಲುವಿನ ತಯಾರಿ
ಅದರಲ್ಲಿ ಸಹಾಯ ಮಾಡಿದವರಿಗೆ ನಾನೆಂದು ರುವಾರಿ



**ದಿಗಂತ ಹೆಚ್.ಡಿ**
ದ್ವಿತೀಯ ಪಿಯುಸಿ ಪಿಸಿಎಂಸಿ
ಕ್ರಿಯೇಟಿವ್ ಪ.ಪೂ ಕಾಲೇಜು, ಕಾರ್ಕಳ

## ಇಷ್ಟಪಡುವ ಒಳ್ಳೆಯ ಮನಸ್ಸಿರಲಿ...

ಒಂದು ರೈಲಿನಲ್ಲಿ ಒಬ್ಬ ಪ್ರಯಾಣಿಕ ಚಲಿಸುತ್ತಿದ್ದ. ಅವನ ಹೆಸರು 'ರಾಮು'. ರಾಮು ರೈಲಿನಲ್ಲಿ ನಿಂತುಕೊಂಡೆ ಪ್ರಯಾಣಿಸುತ್ತಿದ್ದ. ಈ ಸಮಯದಲ್ಲಿ ರಾಮುವಿನ ಹತ್ತಿರ ಇದ್ದ ಒಂದು ಸೀಟು ಖಾಲಿಯಾಯಿತು, ಆಗ ರಾಮು ಆ ಸೀಟನ್ನು ಒಬ್ಬ ಹಣ್ಣು-ಹಣ್ಣಾದ ಮುದುಕನಿಗೆ ಬಿಟ್ಟುಕೊಟ್ಟ. ಹೀಗೆ ಚಲಿಸುತ್ತಾ-ಚಲಿಸುತ್ತಾ ಇನ್ನೊಂದು ಸೀಟು ಖಾಲಿಯಾಯಿತು, ಆಗ ರಾಮು ಮತ್ತೆ ಆ ಸೀಟನ್ನು ಒಬ್ಬ ಮಹಿಳೆಗೆ ಕುಳಿತುಕೊಳ್ಳಲು ಬಿಟ್ಟುಕೊಟ್ಟ. ಹೀಗೆ ಮತ್ತೊಂದು ಸೀಟುಕೂಡ ಖಾಲಿಯಾಯಿತು. ಆಗವು ರಾಮು ಕುಳಿತುಕೊಳ್ಳದೇ ಬೇರೆ ಒಬ್ಬ ಹುಡುಗಿಗೆ ಬಿಟ್ಟುಕೊಟ್ಟ. ಹೀಗೆ ತಾನು ಪ್ರಯಾಣಿಸುತ್ತಿರುವಾಗ ಎಷ್ಟೊಂದು ಸೀಟು ಖಾಲಿಯಾದರೂ ರಾಮು ತಾನು ಕುಳಿತುಕೊಳ್ಳದೇ ಬೇರೆಯವರಿಗೆ ಅವಕಾಶ ಕೊಡುತ್ತ ಬಂದ. ಒಬ್ಬ ಪ್ರಯಾಣಿಕ ಈ ರಾಮುವಿನ ನಡವಳಿಕೆಯನ್ನು ಗಮನಿಸುತ್ತಿದ್ದ. ಸಾಗುತ್ತಾ-ಸಾಗುತ್ತಾ "ಹಾವೇರಿ ರೈಲ್ವೆ ನಿಲ್ದಾಣ" ಬಂತು. ರಾಮು ರೈಲಿನಿಂದ ಕೆಳಗಿಳಿದ ಅದೇ ಸಮಯಕ್ಕೆ ರೈಲಿನಲ್ಲಿ ಈತನ ನಡವಳಿಕೆಯನ್ನು ಗಮನಿಸುತ್ತಿದ್ದ ವ್ಯಕ್ತಿಯು ರೈಲಿನಿಂದ ಕೆಳಗಿಳಿದ. ಆ ವ್ಯಕ್ತಿ ರಾಮುವಿನ ಬಳಿ ಬಂದು ಹೀಗೆ ಹೇಳಿದ, "ತಮಗೆ ಎಷ್ಟೋ ಕುಳಿತುಕೊಳ್ಳುವ ಅವಕಾಶವಿದ್ದರೂ ತಾವು ಏಕೆ ಕೂರಲಿಲ್ಲ ಬದಲಿಗಾಗಿ ಬೇರೆಯವರಿಗೆ ಬಿಟ್ಟುಕೊಡುತ್ತಿದ್ದಿರಿ ಏಕೆ?" ಎಂದು ಕೇಳಿದನು. ಆಗ ರಾಮು ಹೀಗೆ ಉತ್ತರ ನೀಡಿದನು, "ಅಯ್ಯಾ! ನಾನು ಬಡವ, ನನ್ನಹತ್ತಿರ ಹಣ ಇಲ್ಲ, ಹಣ ಕೊಟ್ಟು ಬೇರೆಯವರ ಕಷ್ಟ ಪರಿಹರಿಸುವಷ್ಟು ನಾನು ಶಕ್ತನಲ್ಲ." ಹೀಗಾಗಿ ನಾನು ಈ ತರ ಬೇರೆಯವರಿಗೆ ಸಹಾಯ ಮಾಡುವೆ, ನನ್ನ ಹತ್ತಿರ ಹಣ ಇಲ್ಲವೆಂದರೂ ಕೂಡ ನಾನು ಈ ರೀತಿ ಸಹಾಯ ಮಾಡಲು ಬಯಸುತ್ತೇನೆ ಎಂದನು. ಮತ್ತೆ ರಾಮು ಹೀಗೆ ಹೇಳಿದನು. "ನಾವೆಲ್ಲ ಸಹಾಯ ಮಾಡುವುದೆಂದರೇ ಬರಿ ಹಣ ಕೊಡುವುದು ಎಂದುಕೊಂಡಿದ್ದೇವೆ. ಆದರೆ ನಾವು ಈ ರೀತಿಯ ಸಹಾಯವನ್ನು ಮಾಡುವ ಮೂಲಕ ಅವರ ಕಷ್ಟದಲ್ಲಿ ಭಾಗಿಯಾಗಬಹುದು" ಎಂದನು. ಹೀಗಾಗಿ "ನಾವು ಮಾಡುವ ಪ್ರತೀ ಕೆಲಸದಲ್ಲೂ ಇಷ್ಟಪಡುವ ಒಳ್ಳೆಯ ಮನಸ್ಸಿರಲಿ........."



**ಸಾತ್ವಿಕ್ ಎಂ. ನಾಡಿಗೇರ್**
ದ್ವಿತೀಯ ಪಿಯುಸಿ ಪಿಸಿಎಂಸಿ
ಕ್ರಿಯೇಟಿವ್ ಪ.ಪೂ ಕಾಲೇಜು, ಕಾರ್ಕಳ

## ನನ್ನ ನೆಚ್ಚಿನ ಸಾಧಕ ಸಂಗೊಳ್ಳಿ ರಾಯಣ್ಣ

ಸಂಗೊಳ್ಳಿ ರಾಯಣ್ಣ ಬೆಳಗಾವಿ ಜಿಲ್ಲೆಯ ಕಿತ್ತೂರು ಎಂಬ ಒಂದು ಸಣ್ಣ ಸಂಸ್ಥಾನದಲ್ಲಿ ಸೈನಿಕನಾಗಿ ಕಾರ್ಯ ನಿರ್ವಹಿಸುತ್ತಿದ್ದರು. ದಂಡಿಯಾವಾಘ್‌ನ ಬಂಡಾಯದ ನಂತರ ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ನಡೆದ ಪ್ರಮುಖ ಬಂಡಾಯವೇ ಕಿತ್ತೂರಿನ ಬಂಡಾಯ. ಇದರ ನಾಯಕಿ ಕರ್ನಾಟಕದ ವೀರವನಿತೆಯಲ್ಲಿ ಶ್ರೇಷ್ಠಳಾದ ಕಿತ್ತೂರಿನ ರಾಣಿ ಚೆನ್ನಮ್ಮ ಅವಳ ಶೌರ್ಯ, ಸಾಹಸ ಮತ್ತು ಸ್ವಾತಂತ್ರ್ಯ ಪ್ರೇಮ ಕರ್ನಾಟಕದ ಜನತೆಗೆ ಇಂದಿಗೂ ಸ್ಫೂರ್ತಿದಾಯಕವಾಗಿದೆ. ಬ್ರಿಟಿಷರು ಕಿತ್ತೂರಿನ ಮೇಲೆ ದಾಳಿ ಮಾಡಿದಾಗ ರಾಣಿ ಚೆನ್ನಮ್ಮ ತನ್ನ ಪ್ರಾಣವನ್ನು ಲೆಕ್ಕಿಸದೆ ಹೋರಾಡಿದರು ಆದರೂ ವಿಫಲರಾದರು. ಕಿತ್ತೂರಿನ ಬಂಡಾಯರಾಣಿ ಚೆನ್ನಮ್ಮಳ ಸೋಲಿನಿಂದ ಮುಗಿಯಲಿಲ್ಲ. ಕಿತ್ತೂರಿನ ಬಂಡಾಯ ಮತ್ತೊಮ್ಮೆ ಭುಗಿಲೆದ್ದಿತು. ಇದರ ನಾಯಕ ಕಿತ್ತೂರು ರಾಣಿ ಚೆನ್ನಮ್ಮನ ನಿಷ್ಠಾವಂತ ಸೇವಕ ಸಂಗೊಳ್ಳಿ ರಾಯಣ್ಣ. ರಾಯಣ್ಣ ಸಂಗೊಳ್ಳಿಯ ತಳವಾರ ಹಾಗೂ ಕಿತ್ತೂರಿನ ಸಾಮಾನ್ಯ ಪ್ರಜೆಯಾಗಿದ್ದ. ರಾಯಣ್ಣ ಸುಮಾರು 100 ರಿಂದ 200 ಜನ ಸೈನಿಕರಿಗೆ ಎಲ್ಲಾ ತರಹದ ವಿದ್ಯೆಯನ್ನು ಕಲಿಸಿ, ಶಸ್ತ್ರಾಸ್ತ್ರಗಳನ್ನು ಬಳಸುವುದನ್ನು ತೋರಿಸಿ, ಒಂದು ಮಹಾಸೇನೆಯನ್ನು ಬ್ರಿಟಿಷರ ವಿರುದ್ಧ ಹೋರಾಡಲು ಸಿದ್ಧಮಾಡಿದರು. ಬ್ರಿಟಿಷರನ್ನು ಎದುರಿಸಲು ಸಾಕಷ್ಟು ಸೈನ್ಯ ಹಾಗೂ ಶಸ್ತ್ರಾಸ್ತ್ರಗಳು ಇಲ್ಲದಿದ್ದರೂ ಅವರ ವಿರುದ್ಧ ಕಿರುಕುಳ ಯುದ್ಧವನ್ನು ಆರಂಭಿಸಿದರು. ಸರ್ಕಾರಿ ಕಛೇರಿಗಳಿಗೆ ಬೆಂಕಿ ಯಿಡುವುದು, ಬ್ರಿಟಿಷ್ ಅಧಿಕಾರಿಗಳನ್ನು ಕೊಲೆ ಮಾಡುವುದು ಹಾಗೂ ಬ್ರಿಟಿಷ್ ಖಜಾನೆಯನ್ನು ಧ್ವಂಸ ಮಾಡುವುದು ಅವನ ದಾಳಿಯ ಮುಖ್ಯ ಲಕ್ಷಣಗಳಾಗಿದ್ದವು. ಸ್ವಾರ್ಥರಾಗಿ ಬ್ರಿಟಿಷರ ಪಕ್ಷ ವಹಿಸಿದ್ದ ದೇಶ ದ್ರೋಹಿಗಳನ್ನು ಕೊಲೆಗೈದರು. ರಾಯಣ್ಣನ ದಾಳಿಗಳು ಬ್ರಿಟಿಷರಿಗೆ ತಲ್ಲಣ ಬ್ರಿಟಿಷರ ವಿರುದ್ಧ ಹೋರಾಡಲು ಶಿವಾಜಿ ಮಹರಾಜರ ಗ್ರೆರಿಲ್ಲಾ ಯುದ್ಧ ನೀತಿಯನ್ನು ಅಳವಡಿಸಿಕೊಂಡಿದ್ದರು. ಬ್ರಿಟಿಷರು ತಮ್ಮ ದಂಡ ಯಾತ್ರೆಯನ್ನು ಬಿಡಲಿಲ್ಲ ಚೆನ್ನಮ್ಮ ವೀರಾವೇಶದಿಂದ ಹೋರಾಡಿ, ಬ್ರಿಟಿಷರ ವಶವಾದರು. ತನ್ನ ಸ್ವಾತಂತ್ರ್ಯ ಹೋರಾಟ ವಿಫಲವಾದುದನ್ನು ಹಾಗು ಕಿತ್ತೂರನ್ನು ತನ್ನ ಕಣ್ಣ ಮುಂದೆ ಹಾಳಾಗುವುದನ್ನು ಕಂಡು ಕಾರಾಗೃಹದಲ್ಲಿಯೇ ಮರಣ ಹೊಂದಿದರು. ಸಂಗೊಳ್ಳಿ ರಾಯಣ್ಣನ ಕಾರ್ಯಾಚರಣೆಗಳಿಂದಾಗಿ ಬ್ರಿಟಿಷ್ ಆಡಳಿತಕ್ಕೆ ತಡೆಯಾಗಿ ಕುಸಿಯಲಾರಂಭಿಸಿತು. ಅವರಿಗೆ 4 ತಿಂಗಳು ಆತ ಸಿಂಹಸ್ವಪ್ನನಾದನು. ಬ್ರಿಟಿಷರು ಅವರೊಂದಿಗೆ ನೇರವಾಗಿ ಯುದ್ಧ ಮಾಡಲು ಅಸಾಧ್ಯವೆಂದು ತಿಳಿದು, ಮೋಸದಿಂದ ತನ್ನ ಮಿತ್ರನ ಸಹಾಯದಿಂದ ರಾಯಣ್ಣನ್ನು ಬಂಧಿಸಿದರು. ಕೆಲವು ದಿನಗಳ ನಂತರ ರಾಯಣ್ಣನನ್ನು ಎಲ್ಲರ ಸಮೂಹದಲ್ಲಿ ಗಲ್ಲಿಗೇರಿಸಿದರು. ರಾಯಣ್ಣನ ಪರಾಕ್ರಮಕ್ಕೆ ನಾನು ಋಣಿಯಾಗಿರುತ್ತೇನೆ.

ಜೈಹಿಂದ್, ಜೈಕರ್ನಾಟಕ ಮಾತೆ.
ಧನ್ಯವಾದಗಳು



**ಚೇತನ್ ಸ್ವರೂಪ್**
ಪ್ರಥಮ ಪಿಯುಸಿ ಪಿಸಿಎಂಬಿ
ಕ್ರಿಯೇಟಿವ್ ಪ.ಪೂ. ಕಾಲೇಜು,ಕಾರ್ಕಳ

## ಒಮ್ಮೆ ಬಂದು ನೋಡು ಮುರುಡೇಶ್ವರವೆಂಬ ಬೀಡು

ವೀಕ್ಷನರಿ

ಉತ್ತರ ಕನ್ನಡ ಮಡಿಲ ಕಡಲತೀರದಲ್ಲಿ ಇರುವ ಸುಂದರ ತಾಣ ಮುರುಡೇಶ್ವರ. ಇದು ಕರಾವಳಿಯ ಪ್ರಮುಖ ಐತಿಹಾಸಿಕ ಸ್ಥಳಗಳಲ್ಲಿ ಒಂದಾಗಿದೆ. ನೋಡಲು ಮನಸ್ಸಿಗೆ ಮುದವನ್ನು ನೀಡುವ ನಮ್ಮ ಈ ಶಿವನ ಸನ್ನಿಧಿ ತನ್ನದೆ ಆದ ಇತಿಹಾಸವನ್ನು ಹೊಂದಿದೆ. ಇದು ಕರಾವಳಿ ಕನ್ನಡಿಗರ ಪ್ರೀತಿಗೆ ಪಾತ್ರವಾಗಿರುವುದಷ್ಟೇ ಅಲ್ಲದೆ ಜಗತ್ತಿನ ಅತ್ಯದ್ಭುತ ಸ್ಥಳಗಳಲ್ಲಿ ಒಂದೆಂಬ ಕಿರೀಟವನ್ನು ತನ್ನ ಮುಡಿಗೇರಿಸಿಕೊಂಡಿದೆ.

ಮುರುಡೇಶ್ವರದ ಸ್ಥಾಪನೆಯ ಕುರಿತಾದ ಒಂದು ದಂತ ಕಥೆ ಇದೆ. ಲಂಕಾಧಿಪತಿ ರಾವಣನು ಶ್ರೀ ಶಿವನ ತಪಸ್ಸನ್ನು ಮಾಡಿದನಂತೆ, ಅವನ ತಪಸ್ಸಿಗೆ ಒಲಿದ ಶಿವನು ಅವನಿಗೆ ವರವೊಂದನ್ನು ನೀಡಿದನಂತೆ. ರಾವಣನು ದೇವತೆಗಳನ್ನು ಸೋಲಿಸಲು ಶಿವನ ಆತ್ಮಲಿಂಗವನ್ನೇ ವರವಾಗಿ ಬೇಡಿದನಂತೆ. ಆಗ ಭಯಭೀತರಾದ ದೇವತೆಗಳು ಬಾಲಗಣೇಶನ ಬಳಿ ಓಡೋಡಿ ಬಂದು ದುಷ್ಟ ರಾವಣನು ಮುಂದೆ ಮಾಡಲಿರುವ ಅನಾಹುತವನ್ನು ಹೇಗಾದರು ತಡೆಯುವಂತೆ ಕೇಳಿಕೊಂಡರಂತೆ. ಅದು ಸಂಧ್ಯಾಕಾಲವಾಗಿತ್ತು. ರಾವಣನು ಶಿವನ ಆತ್ಮಲಿಂಗವನ್ನು ಹೊತ್ತುಕೊಂಡು ಭೂಲೋಕದಲ್ಲಿ ನಡೆದುಕೊಂಡು ಬರುತ್ತಿದ್ದನು. ಆಗ ಗಣೇಶನು ಪುಟ್ಟ ಬ್ರಾಹ್ಮಣನ ವೇಷ ಧರಿಸಿ ಅದೇ ದಾರಿಯಲ್ಲಿ ನಡೆದು ಬರುತ್ತಿದ್ದ ಬ್ರಾಹ್ಮಣ ಬಾಲಕನನ್ನು ಕರೆದು ತುಸುಹೊತ್ತಿನ ತನಕ ಆತ್ಮಲಿಂಗವನ್ನು ಹಿಡಿದುಕೊಳ್ಳುವಂತೆ ರಾವಣನು ಕೇಳಿಕೊಂಡನು. ಆದರೆ ಆ ಬ್ರಾಹ್ಮಣ ಬಾಲಕನು ಷರತ್ತೊಂದನ್ನು ಹಾಕಿ 'ನಾನು ಒಂದು..ಎರಡು..ಮೂರು.. ಎಂದು ಎಣಿಸುವಷ್ಟರಲ್ಲಿ ಬರಬೇಕು' ಎಂದನು. ರಾವಣನು ಅವಸರ ಅವಸರವಾಗಿಯೇ ಸ್ನಾನಕ್ಕೆ ಹೋದನು. ಆದರೆ ಬಾಲಕನು ಉದ್ದೇಶಪೂರ್ವಕವಾಗಿಯೇ ಅವನು ಬರುವಷ್ಟರಲ್ಲಿ ಅಂಕಗಳನ್ನು ಎಣಿಸಿ ಆತ್ಮಲಿಂಗವನ್ನು ನೆಲಕ್ಕಿಟ್ಟನಂತೆ ಆಗ ಕೋಪಿತನಾದ ರಾವಣನು ಆತ್ಮಲಿಂಗವನ್ನು ಮೇಲೆತ್ತಲು ಯತ್ನಿಸಿ ಕೈಗೆ ಬಂದ ಆತ್ಮಲಿಂಗದ ತುಂಡುಗಳನ್ನು ಎತ್ತಿ ಎತ್ತಿ ಎಸೆದನಂತೆ ಈ ರೀತಿ ಎಸೆದ ತುಂಡುಗಳು ಮುರುಡೇಶ್ವರ, ಧಾರೇಶ್ವರ, ರಾಮೇಶ್ವರ ಮತ್ತು ಸಜ್ಜೇಶ್ವರಗಳಲ್ಲಿ ಬಿದ್ದಿತಂತೆ. ಆತ್ಮಲಿಂಗದ ಕಿವಿಯ ಭಾಗವು ಅಲ್ಲಿಯೇ ಸಿಲುಕಿ ಆ ಸ್ಥಳವು 'ಗೋಕರ್ಣ' ಎಂದು ಹೆಸರಾಯಿತು ಹೀಗೆ ಶಿವನ ಆತ್ಮಲಿಂಗದ ಒಂದು ಅಂಶವು ಮುರುಡೇಶ್ವರವೆಂಬ ಪ್ರಸಿದ್ಧ ಸ್ಥಳವಾಗಿ ಬೆಳೆಯಿತು.

ನಮಗೆಲ್ಲ ತಿಳಿದಿರುವಂತೆ ಮುರುಡೇಶ್ವರ ಬಹಳ ಆಕರ್ಷಣೀಯವಾಗಿದ್ದು. ಇಲ್ಲಿನ 'ರಾಜಗೋಪುರ'ವು ಹದಿನೆಂಟು ಮಹಡಿಗಳನ್ನು ಹೊಂದಿದೆ. ಕೊನೆಯ ಮಹಡಿಯಲ್ಲಿ ನಿಂತು ಕೆಳಗಿನ ಪರಿಸರವನ್ನು ನೋಡುವುದು ಆಹ್ಲಾದಕರವಾಗಿದೆ. ಇಲ್ಲಿನ 'ಭೂ ಕೈಲಾಸ ಗುಹೆ'ಯು ಯಾತ್ರಿಕರನ್ನು ತನ್ನತ್ತ ಕೈ ಮಾಡಿ ಕರೆಯುತ್ತಿದೆ. ಈ ಗುಹೆಯ ಒಳಗೆ ಪ್ರವೇಶಿಸಿದರೆ ನಮಗೆ ರಾವಣನು ಆತ್ಮಲಿಂಗ ತಂದಂತಹ, ಗಣೇಶ ಅದನ್ನು ಭೂಮಿಯಲ್ಲಿ ನೆಲೆಗೊಳಿಸಿದಂತಹ ಕತೆಯನ್ನು ಹಂತ ಹಂತವಾಗಿ ಕಲ್ಲಿನಲ್ಲಿ ಕೆತ್ತಿ ಚಿತ್ರಿಸಿದ್ದಾರೆ. ಧ್ವನಿವರ್ಧಕದ ಮೂಲಕ ಕಥೆಯನ್ನುವಿವರಿಸುತ್ತಾ ಇರುತ್ತಾರೆ ಇದನ್ನು ಕೇಳುತ್ತಾ ಹೋದಂತೆ ಕಲ್ಲಿನಮೂರ್ತಿಗಳು ಕಥೆಗೆ ಜೀವಂತಿಕೆಯನ್ನು ಕೊಡುತ್ತದೆ ಇಲ್ಲಿಗೆ ಪ್ರತಿ ದಿನ ಸಾವಿರಾರು ಭಕ್ತರು ಕೈಲಾಸವಾಸಿ ಈಶ್ವರನ ದರ್ಶನಕ್ಕೆಂದು ದೂರ ದೂರದ ಊರುಗಳಿಂದ ಬರುತ್ತಾರೆ ವಿಶೇಷವೆಂದರೆ ಇಲ್ಲಿ 123 ಅಡಿಯ ಶಿವನ ಅತೀ ಎತ್ತರವಾದ ಮೂರ್ತಿಯಿದೆ. ಈ ಬೃಹದಾಕಾರದ ಮೂರ್ತಿಯನ್ನು ನೋಡಲು ವಿದೇಶಗಳಿಂದಲೂ ಯಾತ್ರಿಕರು ಬರುತ್ತಾರೆ ಎಂಬುದು ಸಂತಸದ ಸಂಗತಿ. ಇಲ್ಲಿಬರುವ ಸಾವಿರಾರು ಯಾತ್ರಿಕರಿಗೆ ನಿತ್ಯವೂ ಅನ್ನ ಸಂತರ್ಪಣೆ ಇರುತ್ತದೆ.

ಹೀಗೆ ನಮ್ಮ ಕಡಲ ತೀರದ ಯಾತ್ರಾ ಸ್ಥಳ ಮುರುಡೇಶ್ವರ ತನ್ನ ಇತಿಹಾಸದಿಂದ, ಬಾಹ್ಯ ಸೌಂದರ್ಯದಿಂದ ಭಕ್ತರನ್ನು ಪ್ರವಾಸಿಗರನ್ನೂ ತನ್ನತ್ತ ಸೆಳೆಯುತ್ತದೆ. ಹೆದ್ದಾರಿಯಿಂದ ಎರಡು ಕಿಲೋಮೀಟರ್ ದೂರದಲ್ಲಿರುವ ಈ ಸ್ಥಳ ಬಂದ ಭಕ್ತರಿಗೆ ಮತ್ತೊಮ್ಮೆ ಬರುವಂತೆ ಆಮಂತ್ರಣ ನೀಡುತ್ತದೆ. ಸಮುದ್ರ ತೀರವು ಮಕ್ಕಳಿಗೆ ಯುವಕ ಯುವತಿಯರಿಗೆ ಬಲು ಸಂತೋಷವನ್ನು ನೀಡುತ್ತದೆ. ಈ ರೀತಿ ಭಕ್ತರಿಗೆ ಭಕ್ತಿಯನ್ನು ಪ್ರವಾಸಿಗರಿಗೆ ಸವಿನೆನಪನ್ನೂ ಧಾರೆಯೆರೆಯುವ ಈ ಪುಣ್ಯಸ್ಥಳವನ್ನು ಶ್ರೀ ಶಿವನ 'ಎರಡನೇ ಕೈಲಾಸ' ಎಂದರೂ ತಪ್ಪಾಗಲಾರದು.



**ದೀಕ್ಷಿತಾ ಮಂಜುನಾಥ ಮೊಗೇರ**
ಪ್ರಥಮ ಪಿಯುಸಿ ಪಿಸಿಎಂಬಿ
ಕ್ರಿಯೇಟಿವ್ ಪ.ಪೂ ಕಾಲೇಜು, ಉಡುಪಿ



ಕಾವ್ಯೋಕ್ತಿ | ಹೊತ್ತಾರೆ ಹೊರೆಗೆಲಸ ಮಿಕ್ಕರೆ ಮಿಗಲಿ । ಪಕ್ಕದ ನೆರೆಹೊರೆ ನಕ್ಕರೆ ನಗಲಿ । ಬೃಂದಾವನದೊಳ್ ಆಲಿಸಿ ಗೋಮುರಳಿ – ಪು.ತಿ.ನ.



ಜಾನಪದ ಸತ್ವ

# ಅಂಟಿಗೆ ಪಂಟಿಗೆ



ಅಂಟಿಗೆ ಪಂಟಿಗೆಯು ದೀಪಾವಳಿ ಹಬ್ಬದ ಸಂದರ್ಭದಲ್ಲಿ ಕಂಡು ಬರುವಂತಹ ಜನಪ್ರಿಯ ಸಾಂಪ್ರದಾಯಿಕ ಕಲೆ. ಅಂಟಿಗೆ ಪಂಟಿಗೆಯು ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಪ್ರಚಾರದಲ್ಲಿರುವ ಒಂದು ಸಂಪ್ರದಾಯ. ಅವಂಟಿಗ್ಯೋ-ಪವಂಟಿಗ್ಯೋ, ಜಾವಂಟಿಗ್ಯೋ-ಸುಂಟಿಗ್ಯೋ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ತೀರ್ಥಹಳ್ಳಿ ಭಾಗದಲ್ಲಿ ಇದನ್ನು ಅಂಟಿಗೆ ಪಂಟಿಗೆ ಎಂದು ಕರೆಯುತ್ತಾರೆ. ಮುಖ್ಯವಾಗಿ ಒಕ್ಕಲಿಗರು, ದೀವರು, ಲಿಂಗಾಯಿತರು, ಬಂಟರು ಹಾಗೂ ಹಸಲರು ಇದರಲ್ಲಿ ಪಾಲ್ಗೊಳ್ಳುತ್ತಾರೆ. ಅಂಟಿಗೆ ಪದಕ್ಕೆ ಸರಿಯಾದ ಅರ್ಥವಿಲ್ಲ ಆದರೆ ತಮಿಳಿನಲ್ಲಿ ಪಂಟಿಗೆ ಎಂದರೆ ಹಬ್ಬ ಎಂಬ ಅರ್ಥವಿದೆ. ದೀಪಾವಳಿ ಹಬ್ಬದಲ್ಲಿ ದೀಪ ಹಚ್ಚುವುದು ಎಂದು ತಿಳಿಯಬಹುದು.

ಕರ್ನಾಟಕದ ಮಲೆನಾಡು ಭಾಗಗಳಲ್ಲಿ ದೀಪಾವಳಿ ಹಬ್ಬವನ್ನು ಐದು ದಿನಗಳ ಕಾಲ ಆಚರಿಸಲಾಗುತ್ತದೆ. ಅಂಟಿಗೆ ಪಂಟಿಗೆಯು ದೀಪಾವಳಿ ಹಬ್ಬದ ಎರಡನೆ ದಿನದಿಂದ ಪ್ರಾರಂಭವಾಗುತ್ತದೆ. ಹಳ್ಳಿಯ ರೈತರು ಊರಿನ ದೇವಸ್ಥಾನದಲ್ಲಿ ಸೇರಿ ಒಂದು ತಂಡವನ್ನು ಕಟ್ಟಿಕೊಂಡು ಆ ದೇವಸ್ಥಾನದಲ್ಲಿದ್ದ ನಂದಾದೀಪದಿಂದ ಜ್ಯೋತಿಯನ್ನು ಹಚ್ಚಿಕೊಳ್ಳುತ್ತಾರೆ. ಸಾಮಾನ್ಯವಾಗಿ ಜ್ಯೋತಿಯು ಹಿತ್ತಾಳಿಯದ್ದಾಗಿದ್ದು ಹಿಡಿದುಕೊಳ್ಳಲು ಹಿಡಿಕೆಯಿರುತ್ತದೆ. ಜ್ಯೋತಿಯನ್ನು ಹಿಡಿಯುವವರು ತಂಡದ ನಾಯಕತ್ವವನ್ನು ವಹಿಸಿರುತ್ತಾರೆ. ತಂಡದಲ್ಲಿ ಹತ್ತರಿಂದ ಐವತ್ತು ಮಂದಿಯಿರುತ್ತಾರೆ. ಅದರಲ್ಲಿ ನಾಲ್ಕು ಜನ ಹಾಡುವವರು, ಇಬ್ಬರು ಮುಮ್ಮೇಳದವರು, ಇಬ್ಬರು ಹಿಮ್ಮೇಳದವರು. ರಾತ್ರಿಯಲ್ಲಿ ದೇವಸ್ಥಾನದಲ್ಲಿ ಜ್ಯೋತಿಯನ್ನು ಹಚ್ಚಿಕೊಂಡು ಹಾಡುತ್ತಾ ಮನೆಯಿಂದ ಮನೆಗೆ ಹೋಗುತ್ತಾರೆ. ಅಂಟಿಗೆ ಪಂಟಿಗೆಯು ಕೆಲವು ನಿಯಮಗಳಿಂದ ಕೂಡಿರುತ್ತದೆ. ಉದಾಹರಣೆಗೆ ಎರಡು ತಂಡಗಳು ಎದುರು ಬದುರಾಗಿ ಸಂಧಿಸಿ ಮುಂದೆ ಹೋಗಬಾರದು ಅಂತಹ ಸಂಭವಗಳು ಎದುರಾದಾಗ ಅವರು ದೀಪ-ದೀಪೋಳ್ಗೆ ಎಂದು ಗಟ್ಟಿಯಾಗಿ ಕೂಗುವುದರ ಮೂಲಕ ಪರಸ್ಪರ ಎಚ್ಚರಿಕೆ ಕೊಟ್ಟುಕೊಂಡು ಬೇರೆ ಬೇರೆ ಹಾದಿ ಹಿಡಿಯುತ್ತಾರೆ. ದೀಪಾವಳಿ ಹಬ್ಬದ ರಾತ್ರಿಗಳಲ್ಲಿ ಮಾತ್ರ ತಂಡ ಕಟ್ಟಬೇಕು. ದೇವಸ್ಥಾನದಲ್ಲಿ ಹೊತ್ತಿಸಿಕೊಂಡ ದೀಪವನ್ನು ಅಗ್ನಿ ಹುಡಿ ಸೇರುವ ತನಕ ನಂದುವಂತಿಲ್ಲ. ಬಾಗಿಲಿಗೆ ಬಂದ ಜ್ಯೋತಿಯನ್ನು ಸ್ವಾಗತಿಸಿ ಎಣ್ಣೆ ಎರೆಯಬೇಕು. ಜ್ಯೋತಿಯನ್ನು ಹಿಡಿದವರು ಕಾಲಿಗೆ ಚಪ್ಪಲಿ ಧರಿಸುವಂತಿಲ್ಲ. ಹೀಗೆ ದೀಪಾವಳಿಯಂದು ನೆರೆಯ ಊರಿಗೆ ಹೋಗುತ್ತಾರೆ. ಅವರು ಕಂಬಳಿಯನ್ನು ಹೊದ್ದುಕೊಂಡು ಕೈಯಲ್ಲಿ ಕೋಲನ್ನು ಹಿಡಿದು ಬರುತ್ತಾರೆ.

ಒಂದೊಂದು ಮನೆಯ ಮುಂದೆ ನಿಂತು 'ಬಾಗಿಲು ತೆಗೆಯಿರಮ್ಮ ಭಾಗ್ಯದ ಲಕ್ಷ್ಮಮ್ಮ' ಎಂದು ಹಾಡಿ ಬಾಗಿಲು ತೆಗೆದ ನಂತರ ಮನೆಯ ಜಗುಲಿಯನ್ನೇರಿ ಅರ್ಜುನ ಜೋಗಿಯ ಹಾಡು, ಉತ್ತರ ದೇವಿಯ ಹಾಡು. ತೆರೆ ಅಳೆಯುವ ಹಾಡು, ಕರುಹಾಡು ಇತ್ಯಾದಿ ದೀರ್ಘ ಗೀತೆಗಳನ್ನು ಹಾಡುತ್ತಾರೆ. ಹಾಡಿನಲ್ಲಿ ದ್ವಿಪದಿ, ತ್ರಿಪದಿಗಳು, ಚೌಪದಿಗಳಿಂದ ರಚನೆಗೊಂಡಿರುತ್ತವೆ. ಅಪರೂಪವಾಗಿ ಲಾವಣಿ ಅಥವಾ ಕೋಲಾಟದ ಮಟ್ಟುಗಳೂ ಇರುತ್ತವೆ. ಹಾಡುವಾಗ ಯಾವುದೇ ವಾದ್ಯಗಳನ್ನು ಬಳಸುವುದಿಲ್ಲ. "ಎಣ್ಣೆ ಎರೆದರೆ ಪುಣ್ಯವು ನಿಮಗೆ ಪುಣ್ಯೋಳ್ಳಾಗಿ ಸುಖ ಬಾಳಿ" ಎಂದು ಹಾಡುವುದರ ಮೂಲಕ ಜ್ಯೋತಿಗೆ ಎಣ್ಣೆಯೆರೆಯುವಂತೆ ಕೇಳುತ್ತಾರೆ. ನಂತರ ಅವರು ಇಡುತ್ತಾರೆ. ಜ್ಯೋತಿಯಿಂದ ಹಣತೆಯನ್ನು ಹಚ್ಚಿಕೊಂಡು ದೇವರ ಕೋಣೆಯಲ್ಲಿ ಇಡುತ್ತಾರೆ. ಅವರಿಗೆ ಧಾನವಾಗಿ ವೀಳ್ಯದೆಲೆ, ಅಡಿಕೆ, ಅಕ್ಕಿ, ಭತ್ತ, ಹಣವನ್ನು ನೀಡುತ್ತಾರೆ. ಮೂರು ದಿನದ ನಂತರ ದೇವಸ್ಥಾನದಲ್ಲಿ ಅಥವಾ ಹಾಲುಮರದ ಮೇಲೆ ಜ್ಯೋತಿಯನ್ನು ಹಿಡಿದು ತಂದಿದ್ದ ಹಣತೆಯಿಂದ ಬತ್ತಿಯನ್ನು ಮರದ ಮೇಲೆಯಿಟ್ಟು ಕೈ ಮುಗಿದು, ಜ್ಯೋತಿ ಕಳುಹಿಸುವ ಪದಗಳನ್ನು ಹಾಡುತ್ತಾರೆ. "ಒಂದೇ ಬಟ್ಟಲು, ಒಂದೇ ಬೆಲ್ಲದಚ್ಚು, ಒಂದೆಲೆ ಹಲಸು ಬಲ ಬಂದು, ಒಂದೆಲೆ ಹಲಸು ಬಲ ಬಂದು ಜ್ಯೋತ್ಯಮ್ಮ ತಾಯಿ, ಒಂದೆ ದೀವಿಗೆಲೆ ಗುಡಿದುಂಬಿ, ಒಂದೆ ದೀವಿಗೆಲೆ ಗುಡಿದುಂಬಿ ಜ್ಯೋತ್ಯಮ್ಮ ತಾಯಿ, ಇಂದ್ಹೋಗಿ ಮುಂದೆ ಬರಬೇಕು" ಎಂದು ಹಾಡುತ್ತಾರೆ. ಹಾಗೂ ತಾವು ಸಂಗ್ರಹಿಸಿದ ಸ್ವಲ್ಪ ಧಾನ್ಯಗಳಿಂದ ಅಡುಗೆ ಮಾಡಿ, ಜ್ಯೋತಿಗೆ ಎಡೆ ನೀಡಿ ಅಂಟಿಗೆ ಪಂಟಿಗೆ ಔಂತ್ಲ" ಎಂಬ ಸಾಮೂಹಿಕ ಔತಣ ಕೂಟವನ್ನು ಮಾಡುತ್ತಾರೆ ಹಾಗೂ ಉಳಿದ ಧನ, ಧಾನ್ಯಗಳನ್ನು ದೇವಸ್ಥಾನಕ್ಕೆ ನೀಡುತ್ತಾರೆ.

ಈ ಸಂಪ್ರದಾಯವು ದೀಪ ಮತ್ತು ಅದಕ್ಕೆ ಸಂಬಂಧಿಸಿದ ನಂಬಿಕೆಯ ಅಂಶ ಎದ್ದು ಕಾಣುತ್ತದೆ. ದೀಪ ಅಂಟಿಸುವ ಕ್ರಿಯೆ ಪ್ರಧಾನವಾಗಿಯೂ, ಸುಗ್ಗಿ ಒಳ್ಳೆಯದನ್ನು ಹೊತ್ತು ತರಲಿ ಎಂಬ ಹಾರೈಕೆ ವ್ಯಕ್ತವಾಗಿದೆ. ಮಲೆನಾಡಿನ ಸಾಂಸ್ಕೃತಿಕ ಕನ್ನಡಿಯಂತಿರುವ ಈ ಸಂಪ್ರದಾಯವು ಅಜ್ಞಾನದ ಕತ್ತಲನ್ನು ಆ ಮೂಲಕ ಸಂಕಷ್ಟಗಳನ್ನು ಕಳೆಯುವ ಮುಖ್ಯ ಆಶಯವನ್ನು ಹೊಂದಿದೆ. ಆದರೆ ಈಗ ಇಂತಹ ಜನಪದ ಕಲೆಗಳು ನಶಿಸಿ ಹೋಗುತ್ತಿವೆ. ಆದರೆ ಕೆಲವರಾದರೂ ಇಂತಹ ಜನಪದ ಕಲೆಗಳನ್ನು ಉಳಿಸಲು ಪ್ರಯತ್ನಿಸುತ್ತಿದ್ದಾರೆ. ಈ ಪ್ರಯತ್ನ ಯಶಸ್ವಿಯಾಗಬೇಕು ಹಾಗೂ ಎಲೆಮರೆಯ ಕಾಯಿಯಂತಿರುವ ಈ ಜನಪದ ಕಲೆ ಉಳಿಯಬೇಕು ಎಂಬುದು ನನ್ನ ಆಶಯವಾಗಿದೆ.

ಅಂಟಿಗೆ ಪಂಟಿಗೆ ವೀಕ್ಷಣೆಗೆ ಈ QR ಕೋಡ್ ಬಳಸಿ

YouTube @creativeedumedia



**ಹನಿ ಹೆಚ್.ಎಂ**
ಪ್ರಥಮ ಪಿಯುಸಿ ಪಿಸಿಎಂಬಿ
ಕ್ರಿಯೇಟಿವ್ ಪ.ಪೂ ಕಾಲೇಜು, ಉಡುಪಿ


# ಬೆಳಗಲಿ ಸ್ತ್ರೀ ಶಕ್ತಿ..

ಭೂಮಾತೆಯ ಮಡಿಲಲಿ ಕಂಡಿರುವೆ ನಾ ಸ್ವರ್ಗ
ಮಮತೆಯ ಬಾಳಲಿ ತುಂಬಿರುವುದು ನಿಸರ್ಗ
ಗೋಮಾತೆ ಪ್ರೀತಿಯಿಂದ ಇತ್ತಿರುವಳು ಕ್ಷೀರಧಾರೆ
ಮಹಿಳೆಯ ಮಹತ್ವ ಅರಿಯಲಿ ಪ್ರತಿಯೊಬ್ಬ ತಾರೆ॥

ಮರೆತಿರುವುದು ಈ ಜಗವು
ಮನುಷ್ಯತ್ವದ ನಿಲುವು
ಏಕೆ ಈ ಹಿಂಸೆ? ಏಕೆ ಈ ದುಷ್ಟಬುದ್ಧಿ
ಮಾನವೀಯತೆಯಾಗಲಿ ನಮ್ಮೆಲ್ಲರ ಸಿದ್ಧಿ॥



ಜೀವ ನೀಡಲು ಬೇಕಿತ್ತು ಹೆಣ್ಣು
ಅದೇ ಹೆಣ್ಣಿನ ಜೀವ ಮಾಡಿದರು ಮಣ್ಣು
ಸ್ತ್ರೀ ದೌರ್ಜನ್ಯದ ಕ್ರೂರ ಪಾಪ ನಿಲ್ಲಿಸಿ
ಹೆಣ್ಣೆಂಬ ದೇವಿಗೆ ಗೌರವವನು ಸಲ್ಲಿಸಿ॥

ದುಷ್ಕೃತ್ಯದಿಂದ ಆಗುವುದು ಕಲಿಯುಗದ ವಿನಾಶ
ಇತಿಹಾಸ ಕಂಡಿದೆ ಕಳೆದುಹೋದ ಪ್ರಕಾಶ
ಎದ್ದೇಳಿ ಬಂಧುಗಳೇ, ಬೆಳಗೋಣ ಹೊಸ ಯುಕ್ತಿ
ಉಸಿರಿನ ಒಡಲಾಗಿದೆ ಸ್ಫೂರ್ತಿಯ ಸ್ತ್ರೀ ಶಕ್ತಿ॥



**ಸಾನ್ವಿ ರಾವ್**
ಪ್ರಥಮ ಪಿಯುಸಿ ಇಬಿಎಸಿ
ಕ್ರಿಯೇಟಿವ್ ಪ.ಪೂ ಕಾಲೇಜು, ಕಾರ್ಕಳ


# ಪರಿಸರ ಸಂರಕ್ಷಣೆ

ಜಾಗೃತಿ

ಪ್ರಕೃತಿಗೂ ಮಾನವರಿಗೂ ಗಾಢವಾದ ಸಂಬಂಧವಿದೆ. ಅವನು ಪ್ರಕೃತಿಯಲ್ಲಿಯೇ ಹುಟ್ಟಿ, ಪ್ರಕೃತಿಯಲ್ಲೇ ಬದುಕಿ ಕೊನೆಗೆ ಪ್ರಕೃತಿಯಲ್ಲೇ ಮಣ್ಣಾಗಿ ಹೋಗುತ್ತಾನೆ. ತನಗೆ ಬೇಕಾದ ಎಲ್ಲವನ್ನೂ ಪ್ರಕೃತಿಯಿಂದಲೇ ಪಡೆಯುತ್ತಾನೆ. ಆದ್ದರಿಂದ ಪ್ರಕೃತಿಯನ್ನು 'ಪ್ರಕೃತಿಮಾತೆ' ಎಂದು ಕರೆಯುತ್ತೇವೆ. ಆದರೆ ಮಹಾ ಸ್ವಾರ್ಥಿಯಾದ ಮಾನವನಿಂದ ಇಂದು ಗ್ರಾಮ ನಗರ ಸೇರಿದಂತೆ ಸಂಪೂರ್ಣ ಪರಿಸರ ಮಲಿನವಾಗಿ ಪರಿಸರ ನಾಶದೊಂದಿಗೆ ತನ್ನ ವಿನಾಶವನ್ನು ತನ್ನ ಹತ್ತಿರ ತಂದುಕೊಳ್ಳುತ್ತಿದ್ದಾನೆ. ಇಂಥ ಪರಿಸ್ಥಿತಿ ಹೀಗೆ ಮುಂದುವರೆದರೆ ನಮ್ಮ ಸರ್ವನಾಶ ನಮ್ಮ ಕಣ್ಣೆದುರಲ್ಲಿಯೇ ನಡೆಯುವುದರಲ್ಲಿ ಯಾವುದೇ ಅನುಮಾನವಿಲ್ಲ. ಇದು ನಡೆಯಬಾರದೆಂದರೆ ವಿದ್ಯಾರ್ಥಿಗಳಾದ ನಾವು ಪರಿಸರ ಸಂರಕ್ಷಣೆಯ ಮಹತ್ವ ಕಾರ್ಯದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಬೇಕು. ನಿಸರ್ಗದ ಜೊತೆ ಬೆರೆತು ಬಾಳಿದರೆ ಪರಿಸರದ ಮೇಲೆ ದುಷ್ಪರಿಣಾಮ ಬೀರುವ ಪರಿಸರದ ಉಳಿವಿಕೆಗೆ ಪೂರವಾಗುವ ವಿಷಯಗಳ ಬಗ್ಗೆ ನಮ್ಮ ಸಾಮಾನ್ಯ ಜ್ಞಾನತಾನಾಗಿಯೇ ಬೆಳೆಯುತ್ತದೆ. ಇದಕ್ಕೆ ಮಾಡಬೇಕಾದದ್ದು ಇಷ್ಟೆ, ನಮ್ಮಶಾಲೆ, ಕಾಲೇಜು, ಮನೆ ಸೇರಿದಂತೆ ಸುತ್ತಲಿನ ಪರಿಸರವನ್ನು ಮಲಿನವಾಗದಂತೆ ಸ್ವಚ್ಛವಾಗಿಟ್ಟುಕೊಳ್ಳಬೇಕು. ಪರಿಸರ ದಿನಾಚರಣೆಯಂದು ವಿದ್ಯಾರ್ಥಿಗಳು ತಮ್ಮ ಮನೆ, ಗ್ರಾಮ ಮತ್ತು ಶಾಲೆಗಳಲ್ಲಿ ಗಿಡಗಳನ್ನು ನೆಟ್ಟು ಪೋಷಿಸಬೇಕು. ವಿದ್ಯಾರ್ಥಿಗಳು ತಮ್ಮ ಗುಂಪಿನ ಮೂಲಕ ಮಾರುಕಟ್ಟೆ ಪ್ರದೇಶಗಳಿಗೆ ಹೋಗಿ ಅಲ್ಲಿನ ವ್ಯಾಪಾರಿಗಳಿಗೆ ಆಹಾರ ಬೆಳೆಗಳು ಮತ್ತು ಹಣ್ಣು ತರಕಾರಿಗಳಿಗೆ ರಾಸಾಯನಿಕಗಳನ್ನು ಸಿಂಪಡಿಸದಂತೆ ತಿಳಿಹೇಳಬೇಕು ಮತ್ತು ತಮ್ಮ ಹತ್ತಿರದ ಪ್ರದೇಶಗಳಲ್ಲಿರುವ ನದಿ, ಕೆರೆ, ಬಾವಿಗಳ ಹತ್ತಿರ ನೈರ್ಮಲ್ಯ ಕಾಪಾಡುವ ಸಂದೇಶಗಳನ್ನೊಳಗೊಂಡ ಭಿತ್ತಿಪತ್ರವನ್ನು ಅಂಟಿಸುವ ಮೂಲಕ ಮಾಲಿನ್ಯವನ್ನು ನಿಯಂತ್ರಿಸುವಂತೆ ಜನರಲ್ಲಿ ಅರಿವನ್ನು ಮೂಡಿಸಬೇಕು. ಸುತ್ತಮುತ್ತಲು ಹಸುರು ಹೆಚ್ಚುವಂತೆ ಪ್ರಯತ್ನ ಮಾಡಬೇಕು. ನಮ್ಮ ಹುಟ್ಟುಹಬ್ಬದಂದು ಇತರೆ ವಿಶೇಷ ದಿನಗಳಂದು, ಗಿಡ ನೆಡುವ ಕಾರ್ಯವನ್ನು ಕೈಗೊಳ್ಳಬೇಕು. ಅವುಗಳಿಗೆ ನೀರೆರೆಯಲು ಮಾತ್ರ ಮರೆಯಬಾರದು. ಸಮಾರಂಭಗಳಲ್ಲಿ ಸುಲಭವಾಗಿ ಮಣ್ಣಾಗಿ ಹೋಗುವ ಪರಿಸರ ಸ್ನೇಹಿ ವಸ್ತುಗಳನ್ನು ಬಳಸಬೇಕು. ಪ್ಲಾಸ್ಟಿಕ್ ಬದಲು ಬಟ್ಟೆ ಅಥವಾ ಕಾಗದದ ಚೀಲಗಳನ್ನು ಬಳಸಬೇಕು. ಸಾರ್ವಜನಿಕ ವಸ್ತುಗಳನ್ನು ಸಂಯಮದಿಂದ ಬಳಸಬೇಕು ಸಾರ್ವಜನಿಕ ವಾಹನಗಳನ್ನು ಹೆಚ್ಚಾಗಿ ಬಳಸಲು ಪ್ರಯತ್ನ ಮಾಡಬೇಕು. ಇದರಿಂದ ಪರಿಸರವೂ ಉಳಿಯುತ್ತದೆ. ದೇಶದ ಪೆಟ್ರೋಲಿಯಂ ಆಮದಿನ ಹೊರೆಯೂ ಕಡಿಮೆಯಾಗುತ್ತದೆ. ಪರಿಸರವೇ ಸೃಷ್ಟಿಯ ಪ್ರತಿಯೊಂದು ಜೀವಿಯ ಆಕರ ಆದ್ದರಿಂದ ಪರಿಸರವನ್ನು ನಾವು ಉಳಿಸಿ ಬೆಳೆಸಿಕೊಂಡು ಹೋಗಬೇಕಾದರೆ ನಾಶವಾಗುತ್ತಿರುವ ಪರಿಸರವನ್ನು ಸಂರಕ್ಷಿಸುವ ಅರಿವನ್ನು ವಿದ್ಯಾರ್ಥಿಗಳಷ್ಟೇ ಅಲ್ಲದೆ ಪ್ರತಿಯೊಬ್ಬರು ಮಾಡಬೇಕಾದದ್ದು ಆದ್ಯ ಕರ್ತವ್ಯವಾಗಿದೆ. "**ಕಾಡು ಬೆಳೆಸಿ ನಾಡು ಉಳಿಸಿ**"



**ಮುಕ್ತ ಯು.ಎಂ**
ಪ್ರಥಮ ಪಿಯುಸಿ ಪಿಸಿಎಂಬಿ
ಕ್ರಿಯೇಟಿವ್ ಪ.ಪೂ ಕಾಲೇಜು, ಉಡುಪಿ


# ಕತ್ತಲು

ಹೀರುವ ಬತ್ತಿ,
ಆರದ ಎಣ್ಣೆ
ದೀಪಕೆ ನಾಳೆಗೆ ಮುಪ್ಪಿತ್ತು....



ದಾರಿಯ ನೀರವ
ಸಹಿಸದ ಗಾಳಿ,
ಹಚ್ಚಿದ ಹಣತೆಯ ಅಪ್ಪಿತ್ತು....

ಕತ್ತಲ ಮಡಲಿಗೆ
ಬೆಳಕಿನ ಹೆಣ...!
ದೇವರ ಲೆಕ್ಕವೇ ತಪ್ಪಿತ್ತು...



**ರಾಜೇಶ್**
ಉಪನ್ಯಾಸಕರು
ಕ್ರಿಯೇಟಿವ್ ಪ.ಪೂ ಕಾಲೇಜು, ಕಾರ್ಕಳ



# ನೆನಪು

ನೀನಿಲ್ಲದ ನೆನಪುಗಳಿಲ್ಲ
ನೀನಿಲ್ಲದ ನೆನಪೇ, ನೆನಪಿಲ್ಲ
ನೀನಿಲ್ಲದೆ ನೆನಪೇ ಇಲ್ಲಾ

ನೀನಿರುವ ನೆನಪ ನೆನೆದು
ನಿನ್ನ ನೆನಪಿನೊಂದಿಗೆ ಈ ದಿನವ ಸವೆಸಿ

ಮತ್ತೇ ಮತ್ತೇ ಪ್ರತಿ ದಿನವ
ನಿನ್ನ ನೆನಪಿನೊಂದಿಗೆ ಪೋಣಿಸಿ
ಸಾಗುವ ದಾರಿಯಲ್ಲಿ

ಕಡೆಯಲ್ಲಿ ಉಳಿದದ್ದು ನಿನ್ನ ನೆನಪು ಮಾತ್ರ....




# ಚಿಂತೆ ಇಲ್ಲದ ಬದುಕು

ಇಲ್ಲದವನಿಗೆ, ಇರಬೇಕೆಂಬ
ಇದ್ದವನಿಗೆ, ಸಹಿಸಬೇಕೆಂಬ
ಸಹಿಸಿದವನಿಗೆ, ಸಾಗಿಸಬೇಕಂಬ
ಸಾಗಿಸಿದವನಿಗೆ, ಸಾವೆಂಬ ಚಿಂತೆ

ಚಿಂತೆ ಇಲ್ಲದ ಬದುಕು
ಚಿತೆಯಲ್ಲಿದ್ದವನಿಗೆ ಮಾತ್ರ





**ಸುಜಯ್ ಬಿ.ಟಿ**
ಉಪನ್ಯಾಸಕರು, ರಸಾಯನ ಶಾಸ್ತ್ರ
ಕ್ರಿಯೇಟಿವ್ ಪ.ಪೂ ಕಾಲೇಜು, ಕಾರ್ಕಳ


ಕಾವ್ಯೋಕ್ತಿ | ಮೌನ ಮೊಗ್ಗೆಯನೊಡಿದು ಮಾತರಳಿ ಬರಲಿ । ಮೂರು ಘಳಿಗೆ ಬಾಳು ಮಗಮಗಿಸುತಿರಲಿ । – ಚನ್ನವೀರ ಕಣವಿ






Yenepoya Institute of Technology is an engineering college sponsored by Islamic Academy of Education which was founded in the year 1991 and runs various educational institutions.

## Academic Ambience

Advanced learning process.
Research and Industries collaboration.
Innovation, Incubation and skill hub.

NBA NATIONAL BOARD of ACCREDITATION

Computer Science & Engineering.
Mechanical Engineering.




## Courses Offered @ YIT

Artificial Intelligence & Machine Learning.
Computer Science & Engineering.
CSE in IOT,Cyber Security including Block Chain Technology.
Electrical & Electronics Engineering.
Electronics & Communication Engineering.
Information Science & Engineering.
Mechanical Engineering.

## Staff of YIT

Innovation Ambassador of MHRD Innovation Cell (MIC), Government of India.
Mentor of Change for ATAL Tinkering Lab, NITI AYOG, Government of India.
Mentor of ATAL Tinkering Lab, , Government of Haryana State.
Mentor for MHRD Innovation Council National Level Innovation Contest.

## NCC Unit @ YIT



4KAR ENG COY unit: Now active with NCC motto "UNITY AND DISCIPLINE".

## Placement @ YIT

YIT placement activities are boosted by MoUs and Internship with ATS Learning Solutions, Impelsys (MNC).
Spectra Advanced Engineering and MEP.
SMEC Automation,Red Hat Academy and Lohatec.

## CAMPUS PLACEMENT PARTNERS

DXC.technology, SLK, Infosys, amazon, IBM, Impelsys, TATA, KodNest, iWave, wipro, QSpiders, ACCORD, Wel Wings, TechJini, accenture, Talentio, Ospecbee, TSTS, Micromatic, mycaptain, Capgemini, 7EDGE, [24]7.ai, silverpeak, adani, BOSCH, jaro education, Robosoft, WINDCARE, MAHLUS

## Add-on Certification

Microsoft  tcs iON  IBM

## YEN Achievers

CONGRATULATIONS



YITian was the winner of YOUTH INNOVATION CHALLENGE out of 3500 ideas and won Rs. 1 Lakh from the Govt. of Karnataka.



Our proud Alumni will soon be donning the uniform of Central Industrial Security Forces (CISF).







## Institution Recognition

INSTITUTION'S INNOVATION COUNCIL (Ministry of HRD Initiative)  NEW AGE INNOVATION NETWORK  MSME  UKAC  COMPUTER SOCIETY OF INDIA  ISTE  IEEE  CII  YENEPOYA INSTITUTE OF TECHNOLOGY, MOODBIDRI

Ph: 7349640850, 9686155557  www.yit.edu.in  email: info@yit.edu.in

yenepoya_institute of technology  yitengineering  @yen_Institute

Advt.